# HAVYAKA SANDESHA

# ಹವ್ಯಕ ಸಂದೇಶ

॥धर्मो रक्षति रक्षितः॥

A Monthly Newsletter of Havyaka Welfare Trust, Estd. 1964

Vol. XXVI No.04 | JULY 2017 | Pages 16 | Rs. 2/-


## Karki Venkataramana Shastri Suri Award Ceremony 2017





PAGE DONATED BY : M/S. METALLURGICAL SERVICES, COURTESY : SHRI RAMESH G. HEGDE, MADAPPAN, KARKI, DADAR T.T.

# Glimpses of Award Ceremony



PAGE DONATED BY : **ADVOCATE M. S. PANDIT**, PUNE

"Havyaka Sandesha" is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆ 2665 2591

*Hon. Editor* : Smt. Amita S. Bhagwat

*Editorial Committee* : Smt. Shashikala Hegde, Smt. Tanuja Hegde, Shri Gautam Upadhya, Smt. Uma Swamy

*Publisher* : Narayan Akadas R. Hon. Gen. Secretary

*Printed at* : M/s. Navin Printers Mumbai - 400 016. ✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :** Patron (PT) Rs. 5010/-, Benefactor (BN) Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page Rs. 5000/- annum Rs. 500/- one time.
½ Page Rs. 10,000/- annum Rs. 1,000/- one time
Full Page Rs.15,000/- annum Rs. 2,000/- one time
Matrimonial Rs. 500/- per Issue

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2016-2017**

| | |
|---|---|
| *President* | : Shivkumar P. Bhagwat |
| *Vice - President* | : Sanjay Bhat |
| *Hon. Gen. Secretary* | : Narayan Akadas |
| *Hon. Jt. Secretary* | : Umesh Hegde |
| *Hon. Treasurer* | : A. G. Bhat |

***Elected Members :***

| | |
|---|---|
| Smt. Tanuja Hegde | A. K. Bhat |
| Smt. Shashikala Hegde | R. N. Kameshwar |
| Gautam Upadhya | Smt. Uma Swamy |
| Keshav Hegde | Chidanand Bhagwat |
| R. M. Shastri | |

***ಸಂಪಾದಕೀಯ***

# ಕಾಲವನ್ನು ಮೀರಿದವರು

'ಕಾಲಾಯ ತಸ್ಮೈ ನಮಃ' ಎನ್ನುವ ಉಕ್ತಿಯಿದೆ. ಏಕೆಂದರೆ ಕಾಲವು ಏನನ್ನೆಲ್ಲಾ ಬದಲಾಯಿಸುತ್ತದೆ. ನೋಟಗಳು ಬದಲಾಗುತ್ತವೆ. ಇಂದಿನ ನಂಬಿಕೆ, ಸಿದ್ಧಾಂತಗಳು ನಾಳೆಗೆ ಬೇರೆಯಾಗಬಹುದು. ನ್ಯಾಯ, ಅನ್ಯಾಯಗಳ ಮಾನದಂಡವೂ ಬದಲಾಗಬಹುದು. ಜನನ ಮರಣಗಳ ನಡುವಿನ ನಮ್ಮ ಪಯಣವೂ 'ಕಾಲ'ದ ಅಂಕುಶದ ಹಿಡಿತದಲ್ಲಿದೆಯಲ್ಲವೇ?

ಪ್ರಾಚೀನ ಕಾಲದಲ್ಲಿ ತ್ರಿಕಾಲ ಜ್ಞಾನಿಗಳಿರುತ್ತಿದ್ದರಂತೆ. ಭೂತ, ವರ್ತಮಾನ ಹಾಗೂ ಭವಿಷ್ಯವನ್ನು ಅರಿಯಬಲ್ಲವರಾಗಿದ್ದರಂತೆ. ತಮ್ಮ ತಪೋಬಲದಿಂದ ಅದನ್ನು ಸಿದ್ಧಿಸಿಕೊಂಡವರು. ಅವರ ಹೆಸರುಗಳನ್ನು ನಾವು ಇಂದೂ ಉಲ್ಲೇಖಿಸುತ್ತೇವೆ.

ಇತಿಹಾಸದ ಪುಟಗಳಲ್ಲಿ ಇಣುಕಿದಾಗ ಕೆಲವರು ಮನೋಬಲವುಳ್ಳವರು. ಕಾಲಧರ್ಮಕ್ಕೆ ಮೀರಿದ ಪ್ರಜ್ಞೆಯುಳ್ಳವರು. ಸಮಾಜದ ಅಂಕುಡೊಂಕುಗಳನ್ನು ಅರಿಯುವಂತಹ ವಿಶೇಷ ದೃಷ್ಟಿಯುಳ್ಳವರಷ್ಟೇ ಅಲ್ಲ ಅದನ್ನು ಎತ್ತಿ ತೋರಿಸುವಂತಹ ಕೆಚ್ಚೆದೆಯುಳ್ಳವರು. ಜನರ ಚಿಂತನೆಯನ್ನು ಪ್ರಭಾವಗೊಳಿಸಿದವರು, ಬದಲಾಯಿಸಿದವರು. ಆದರ್ಶ ಸಮಾಜದ ಕನಸು ಕಂಡು ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾದವರು. 'ಕಾಲ' ದ ಮಿತಿಗೆ ಒಳಗಾದರೂ ಕಾಲಗರ್ಭದಲ್ಲಿ ಮರೆಯಾಗದವರು. ಜನಮಾನಸದಲ್ಲಿ ನೆಲೆ ನಿಂತವರು. ಅವರೇ ಮಹಾಪುರುಷರೆನಿಸಿಕೊಳ್ಳುತ್ತಾರೆ.

ನಾವು ಅವರ ಬಗ್ಗೆ ಮತ್ತೆ ಮತ್ತೆ ಓದುತ್ತೇವೆ. ನಮ್ಮ ಮಾತುಕತೆಗಳಲ್ಲಿ, ಚರ್ಚೆಗಳಲ್ಲಿ ಅವರು ಪುನಃ ಚೇತನಗೊಳ್ಳುತ್ತಾರೆ. ಗೌತಮ ಬುದ್ಧ, ಮಹಾವೀರ, ಸಾಕ್ರೆಟಿಸ್, ಕನಫ್ಯೂಶಿಯಸ್, ಮಹಾತ್ಮಗಾಂಧಿ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಶಂಕರಾಚಾರ್ಯರು, ವಿವೇಕಾನಂದರು ಅಲ್ಪಾಯುಷಿಗಳಾದರೂ ಅವರ ಕಾರ್ಯಸಿದ್ಧಿ ಕಾಲಾಂತರಗಳಲ್ಲಿ ಉಳಿಯುವಂತಹದ್ದು. ಕಾರ್ಲ್‌ಮಾರ್ಕ್ಸ್‌ನ ಸಮಾಜವಾದದ ಬಗ್ಗೆ ಚರ್ಚೆ ನಡೆಯುತ್ತಲೇ ಇರುತ್ತದೆ. ಕೆಲವರ ಸಿದ್ಧಾಂತಗಳನ್ನು ನಾವು ಒಪ್ಪದೆಯೇ ಇರಲೂಬಹುದು. ಆದರೂ ಕೂಡಾ ಅವರ ಸಿದ್ಧಾಂತ ನಮ್ಮೊಂದಿಗೇ ಸಾಗುತ್ತವೆ. ಇನ್ನು ಕೆಲವರ ಸಾಧನೆಗಳು ಕೇವಲ ಇತಿಹಾಸದ ಪುಸ್ತಕಗಳಲ್ಲಿ ದಾಖಲೆಯಾಗಿ ಉಳಿಯದೆ ಮುಂದಿನ ಜನಾಂಗಕ್ಕೂ ಪ್ರೇರಣೆಯಾಗುತ್ತದೆ.

ಜೀವನದಲ್ಲಿ ನಾವು ಕೇವಲ ಓಡುತ್ತಲೇ ಸಾಗುವಂತಿಲ್ಲ. ಆಗಾಗ ನಿಲ್ಲುವುದಷ್ಟೇ ಅಲ್ಲ ಹಿಂತಿರುಗಿಯೂ ನೋಡಬೇಕು. ಕಾಲಪ್ರವಾಹದಲ್ಲಿಯೂ ಅವರ ಹೆಜ್ಜೆ ಗುರುತುಗಳು ತೊಳೆದುಹೋಗಿಲ್ಲ. ಹೆಜ್ಜೆ ಗುರುತಿನ ಅಚ್ಚು ಸ್ಪಷ್ಟವಾಗಿಯೇ ಇವೆ. ನಾವು ಕಲಿಯುವುದು ಇನ್ನೂ ತುಂಬಾ ಇವೆ ಎಂದು ಅವು ಹೇಳುವಂತಿದೆ.

ಇಂತಹ ಒಂದು ಸದಾವಕಾಶ 18.6.2017ರಂದು ಒದಗಿ ಬಂದಿತು. ಆದ್ಯ ಸಾಮಾಜಿಕ ನಾಟಕಗಾರ, ಧೀರ ಪತ್ರಿಕೋದ್ಯಮಿ, ಉದ್ಯಮಿ, ಸಮಾಜ ಸೇವಕ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿಯನ್ನು ಬಹುಮುಖ ಪ್ರತಿಭೆಯ ಧೀಮಂತ ಪತ್ರಿಕೋದ್ಯಮಿ ಎಲ್. ಎಸ್. ಶಾಸ್ತ್ರಿಯವರಿಗೆ ನೀಡಿದ ಸುಸಂದರ್ಭ ಮತ್ತೊಮ್ಮೆ ಕರ್ಕಿ ವೆಂಕಟರಮಣ ಶಾಸ್ತ್ರಿಯವರ ಜೀವನದ ಮೇಲೆ ಬೆಳಕು ಬೀರಿತು. ಅವರು 19ನೆಯ ಶತಮಾನದಲ್ಲಿ ಮುಂಬಯಿಯಲ್ಲಿ ಭಾರತೀಯ ಛಾಪಖಾನೆಯ ಸ್ಥಾಪಿಸಿ ಅನೇಕ ಗ್ರಂಥಗಳನ್ನು ಪ್ರಕಟಿಸಿದರು. ಪತ್ರಿಕೋದ್ಯಮದ ಮೂಲಕ ಬ್ರಿಟಿಷ್ ಸರಕಾರವನ್ನು ಖಂಡಿಸಿದರು. ತನ್ನ ಸಾಮಾಜಿಕ ನಾಟಕದ ಮೂಲಕ ನಮ್ಮನ್ನಾಳುವ ಮೂಢನಂಬಿಕೆಗಳನ್ನು ಪ್ರತಿಭಟಿಸಿದರು. ಶ್ರೀ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯವರು ನ್ಯಾಯದ ಹೋರಾಟದಲ್ಲಿ ಯಾವ ಪ್ರತಿಕೂಲ ಪರಿಸ್ಥಿತಿಯನ್ನಾದರೂ ಎದುರಿಸಬಲ್ಲೆ ಎನ್ನುವ ಆತ್ಮಬಲವುಳ್ಳವರು.

ಮತ್ತೊಮ್ಮೆ ಅವರಿಗೆ ಕರಜೋಡಿಸೋಣ.

*Amita S Bhagwat*


e-mail : amitabhagwat@gmail.com

*PAGE DONATED BY :* ***HEGDE HOSPITAL****, CHEMBUR, COURTESY :* ***DR. DINESH HEGDE***

# HAVYAKA YOUTH WING

✍ Meghana D. Hegde

**MUMBAI LOCAL : 'MASS - ALA'**



80% Mumbaikars start their days with the "thanda-garam" vadapavs and cutting chais at the local shops at suburban railway stations. The morning "bhajans" in the local trains of Mumbai, truly serve as a platform for spiritual upliftment and standing space adjustment among the commuters. You may even hear a few affectionate greetings in the form of expletives in the gloriously crowded trains.

There are class separation in the local trains. These are the general second class, general first, ladies' second and ladies' first classes. Some coaches are also reserved for the differently abled. This separation of classes may seem a little too sophisticated. But the daily commuters will know that the only difference is that first class commuters prefer to curse in English while the second class passengers tend to curse more in Hindi, Marathi or "apun ki " Bombaya bhaasha. Local train fights are one of the most epic and enthralling human interactions one may experience. If you happen to witness one such fight, you'll observe that soon in the course of the fight, all the family members of the participants would be mentioned. But if you happen to volunteer to neutralize the fight, you may end up becoming the victim of the pleasantries thrown by them.

Everyday, lakhs of people travel by trains. The morning and the evening times are the peak rush hours. If you happen to cross the 6.00 pm mark, you can expect to get crushed in the sea of humanity inside the locals. The daring and the more sacrificing commuters (please take note of the sarcasm) tend to sit on the top of the trains, near the pantographs. These are the commuters who seem to have made the tagline "aaj kuch toofani karte hai", their life's motto.

A sitting seat is a rare luxury in local trains. It feels like a gift of manna to get a seat at the peak hours. These seats are the main motivation for passengers to defy Newton's laws of motions, by jumping into the train before it halts at the station.

But coming to a more optimistic point, Mumbai locals teaches one how to fight for one's space in life. It teaches us independence and boldness. These trains teach us to be humble and at the same time to be demanding. In engineering terms, the Mumbai locals take the standing mass to the dynamic locations. However fussy or troublesome the travel by these trains may seem to a first time commuter, one eventually falls in love with the harmonious rattling of these trains on the tracks. The Mumbai locals eventually become the Mumbaikar's lifestyle. A person who can get adjusted to the Mumbai locals, can get adjusted in any corner of the world. There may be a thousand grievances of the commuters regarding the Mumbai local trains. But in the end, the local trains are the lifeline of Mumbai. You need the trains and the trains need you. Mumbai hai meri jaan. Jai Hind!

***Contact :*** **Yashashree Akadas**
**yashashree.akadas@yahoo.in**
**GautamUpadhyay : 9833325265**
**Chidanand Bhagwat : 9819285372**

**Havyaka Welfare Trust - Account Details**

Donors may directly remit the amount in below mentioned accounts of Havyaka Welfare Trust, Kalina, Santacruz (E), Mumbai - 400 098.

| | | |
|---|---|---|
| 1. In favour of | = | Havyaka Welfare Trust |
| Bank | = | Corporation bank |
| Branch | = | Santacruz (E) Mumbai |
| A/c. No. | = | 520141000107073 |
| IFSC Code | = | CORP 0000499 |
| 2. In favour of | = | Havyaka Welfare Trust Women Welfare Cell |
| Bank | = | Corporation Bank |
| Branch | = | Santacruz (E), Mumbai |
| A/c. No. | = | 520141000108711 |
| IFSC Code | = | CORP 0000499 |

*PAGE DONATED BY : SHRI N. R. HEGDE, DOMBIVLI*

# BHOJANA KUTUHALA

✍ Uday Koppikar



When we get up in the morning to the inviting aromas of breakfast and coffee or tea being lovingly prepared by our mother or other ladies of the family, we become eager to complete our daily routine (Dinacharya), pray to God and sit down to a hearty wholesome breakfast. It is the first meal of the day and is a very important part of our daily ritual.

The seers have revealed that we must always start the day with a hearty wholesome breakfast. We have had sound sleep and our stomach has been empty for around eight hours. We should therefore fill up with energy for the day ahead. Our traditional breakfasts in South India of idli, vada, upma etc, are wholesome, nutritionally balanced and filling. Similarly, in other parts of our beloved Motherland, the local breakfasts are ideally suited for local conditions. The best part of these breakfasts is that they use locally available resources and make for a balanced meal which puts enough energy for the day ahead till it is time for lunch or an interim brunch of boiled rice, ghee and pickles.

Idli with sambar and chutney e.g. gives us all the protein, carbohydrates and other nutrients necessary. Besides these are easily digested and assimilated by our body. There is no need to add external vitamins and other additiveis. Whatever is required by the body is already there. It is the ancient version of modern fast food but without the junk that suffuses modern fast food.

In our modern fast life, it is not always possible to make and eat such good fast food at home. This is where the friendly, 'Udupi' restaurants come in. We can enjoy similar fare at reasonable prices even in remote places where the enterprising spirit of our people have set up establishments to cater to the hungry. It is demonstrative of the intrinsic strength of the *Paakashashtra* of the seers.

Adi Shankaracharya, the modern day Vedic seer has said that food prepared by our mother is the best because there is no selfishness in its preparation. She wants the best for her beloved children. The crux here is the love and care of the person who eats the food preparations that matters most. When we apply this concept to restaurants, it means that food prepared there ought to be made with love and care with interest of the patrons at heart. It is of course natural that some compensation should be taken for the fare given. Only, it should not be looked as 'Food being SOLD' but as the hearty contribution by the satisfied patrons for the nutritious meals they have enjoyed that is accepted with grace and humility.

This implies that our patrons should always be satisfied and happy with the food, the service, the courtesy, the homely atmosphere, everything when we are in the food business. It is Indian hospitality at work where the focus is not on profit alone. It is the natural outcome of our *samskaras*, whether we entertain a guest (ATITHI) at home or elsewhere. In fact, we believe ATITHI DEVO BHAVA or the guest is God in human form and must be given respect due to the Almighty. What a far cry from the impersonal, clinical treatment of modern times that we receive wherever our *samskaras* are absent.

## ANNOUNCEMENT

The following Medical treatments are available in Dombivli medical centre. Needy persons can take benefit of this service in concessional rates.

1. **Physiotherapy** - **Dr. Sayali Patwardhan**
   (PT) BPTH (Mum)
   *Timing :* Monday to Saturday
   6.00 p.m. to 7.30 p.m.
   - a) Ultra Sound (US)
   - b) Short Wave Diathermy (CWD)
   - c) Cervical Traction
   - d) Transacutenious Nerve Stimulator (TNS)
   - e) IFT
   - f) Exercise
2. **Ayurvedic Care** - **Dr. Sailee Sachin Lokare**
   M.D. Ayurveda
   Specialist in Panchakarma
   *Timing :* Monday to Saturday
   5.00 p.m. to 6 p.m.
3. **Counselling** - **Dr. Khushboo Nandu**
   Counselling Psychologist
   *Timing :* Monday to Saturday
   5.30 p.m. to 6.30 p.m
   - a) depression
   - b) anger issues
   - c) any kind of addiction
   - d) marital problems
   - e) relationship issues etc

***Contact :***

**Mrs. Jaya Bhat - 9987977330**

**Mrs. Sumitra Bhat - 9167574282**

**Havyaka Medical Centre Dombivli Unit**

B-04, Om Trimurti C.H.S. Ltd., Ambika Nagar, M. G. Road, Dombivli (W) - 421 202 • Phone : 0251-248 7291

*PAGE DONATED BY : SMT POORNIMA AKADAS & FAMILY*

# ಸಂಸ್ಕೃತ ಸಾಹಿತ್ಯದ ಹಿರಿಮೆ

✍ ಶೈಲಜಾ ಹೆಗಡೆ, ಮುಂಬಯಿ

**ಕನ್ನಡ ಕವಿಗಳ ಮೇಲೆ ಕಾಳಿದಾಸನ ಪ್ರಭಾವ :**

ಕವಿಯಿಂದ ಕವಿಗೆ, ಭಾಷೆಯಿಂದ ಭಾಷೆಗೆ ಬಿಡಿಸಲಾರದ ನಂಟು ನಿರಂತರವಾಗಿ ನಡೆದುಕೊಂಡು ಬಂದಿದೆ. ಹಿಂದಿನವರಿಗೆ ಋಣಿಯಿಲ್ಲದ ಕವಿಗಳೇ ಇಲ್ಲ. ಷೇಕ್ಸ್‌ಪಿಯರನಿಗೆ ಟ್ರಾಜಿಡಿ ಕಲ್ಪನೆ ಸಿಕ್ಕಿದ್ದು ಗ್ರೀಸಿನ ಯೂರಿಪೀಡಿಸ್‌ನಿಂದ. ಈ ಪರಿಕಲ್ಪನೆ ಭಾರತೀಯರಿಗೆ, ವಿಶೇಷವಾಗಿ ಕನ್ನಡಿಗರಿಗೆ ಲಭ್ಯವಾಗಿದ್ದು ಬಿ. ಎಂ. ಶ್ರೀಯವರ ಅನುವಾದಗಳ ಮೂಲಕ. ಹಾಗೆಯೇ ಮಾಸ್ತಿಯವರಿಗೆ ನವರಾತ್ರಿ ಕಥೆಗಳನ್ನು ಬರೆಯಲು ಪ್ರಚೋದನೆ ನೀಡಿದ್ದು ಛಾಸರ್‌ನ 'ಕ್ಯಾಂಟರ್‌ಬರೀ ಟೇಲ್ಸ್'. ರಾಷ್ಟ್ರಕವಿ ಕುವೆಂಪುರವರು 'ಕಥೆ ನಿನ್ನದಾದೊಡಂ ಕೃತಿ ನನ್ನ ದರ್ಶನಂ' ಎಂದು ತಮ್ಮ ರಾಮಾಯಣ ದರ್ಶನಂ ಕಾವ್ಯದಲ್ಲಿ ನುಡಿದಿದ್ದಾರೆ. ಸಂಸ್ಕೃತ ಸಾಹಿತ್ಯದಿಂದ ಕನ್ನಡ ಸಾಹಿತ್ಯಕ್ಕೆ ಪಡೆ-ಕೊಳ್ಳುವಿಕೆ, ಸಾವಿರಾರು ವರ್ಷಗಳಿಂದ ನಡೆದುಬಂದ ಸಾಹಿತ್ಯಕ ಸಂಬಂಧವಾಗಿದೆ. ಸಂಸ್ಕೃತದಲ್ಲಿ ಅಗಾಧ ಪಾಂಡಿತ್ಯವುಳ್ಳ ಕನ್ನಡ ಕವಿಗಳು ಕನ್ನಡದಂತೆಯೇ ಸಂಸ್ಕೃತದಲ್ಲಿಯೂ, ಸಂಸ್ಕೃತದಂತೆಯೇ ಕನ್ನಡದಲ್ಲಿಯೂ ಕಾವ್ಯ ರಚಿಸಿದರು. ಕವಿ ಕುಲಗುರು ಕಾಳಿದಾಸನ ಕೃತಿಗಳು ಕನ್ನಡ ಕವಿಗಳ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿವೆ. ಒಂದು ವಿಧದಲ್ಲಿ ಕನ್ನಡದ ಮಾರ್ಗ ಸಾಹಿತ್ಯದ ಅಭಿಜಾತ ಪರಂಪರೆಗೆ ನಾಂದಿ ಹಾಡಿದವನು ಅಥವಾ ಅದಕ್ಕೆ ಮೂಲಪ್ರೇರಣೆ ನೀಡಿದವನು ಕಾಳಿದಾಸನೆನ್ನಬಹುದು.

ಕವಿ ಶ್ರೀವಿಜಯ ತನ್ನ 'ರಘುವಂಶ ಮಹಾಪುರಾಣ' ಕೃತಿಯನ್ನು ಕಾಳಿದಾಸನ ರಘುವಂಶ ಕಾವ್ಯದಿಂದ ಪ್ರಭಾವಿತನಾಗಿ ರಚಿಸಿದನೆಂದೂ, ಕವಿ ಅಸಗನ 'ಕರ್ನಾಟಕ ಕುಮಾರಸಂಭವ' ಬಹುಶಃ ಕಾಳಿದಾಸನ ಸಂಸ್ಕೃತ ಕುಮಾರಸಂಭವದ ಕನ್ನಡೀಕರಣವಿರಬಹುದೆಂದೂ ಊಹಿಸಲಾಗಿದೆ. ಕನ್ನಡ ಸಾಹಿತ್ಯದ ಸುವರ್ಣಯುಗವೆಂದು ಖ್ಯಾತಿಯನ್ನು ಗಳಿಸಿದ ಹತ್ತನೆಯ ಶತಮಾನದ ರತ್ನತ್ರಯರಾದ ಪಂಪ, ಪೊನ್ನ, ರನ್ನರೂ ಕಾಳಿದಾಸನ ಪ್ರಭಾವಕ್ಕೆ ಒಳಗಾಗಿದ್ದರು. ಕಾಳಿದಾಸನ ಕಾವ್ಯಭಾವ ಪಂಪನಲ್ಲಿ ಈ ರೀತಿ ಬಿಂಬಿತವಾಗಿರುವುದು. ಇಂದುಮತಿಯ ಸ್ವಯಂವರದಲ್ಲಿ ಓರ್ವ ರಾಜ:

'ಕಶ್ಚಿತ್ ಕರಾಭ್ಯಾಂ ಉಪಗೂಢನಾಲಂ।  
ಆಲೋಲಪತ್ರಾಭಿಹಿತ ದ್ವಿರೇಫಮ್॥  
ರಜೋಭಿರಂತಃ ಪರಿವೇಷಬಂಧಿ।  
ಲೀಲಾರವಿಂದಂ ಭ್ರಮಯಾಂಚಕಾರ'॥ (ರಘುವಂಶಮ್)

ಇದನ್ನೇ ಪಂಪನ ಕೃತಿಯಲ್ಲಿ, ವಜ್ರಜಂಘ ಮಹಾರಾಜನು ಸಿಂಹಾಸನಾರೂಢನಾದಾಗ ಓರ್ವ ವನಪಾಲಕನಿತ್ತ ಕಮಲವನ್ನು ಲೀಲೆಯಿಂದ ತಿರುಗಿಸಿದ ಸಂದರ್ಭ-

'ತಿರಿವೆವೆಸಪ್ಪಿಳ್ ಮುಸುಮಿವ ಮಧು  
ಕರಂಗಳಂ ಸೋಯೆ ಪರಿವ ಮಕರಂದಸಂ  
ಪರಿವೇಷಂಗೊಡಂತಿರೆ  
ಕರಮೆಸೆದುದು ನೃಪನ ಕಯ್ಯ ಲೀಲಾಂಭೋಜ'॥ (ಆದಿ ಪುರಾಣ)

'ಕನ್ನಡಗವಿಯೊಳಸಗಂ  
ಗನ್ನೂರ್ಮಡಿ ರೇಖೆಗಗ್ಗಳಂ ಸಕ್ಕದದೊಳ್  
ಮುನ್ನುಳ್ಳ ಕಾಳಿದಾಸಂ  
ಗನ್ನಾಲ್ವಡಿ ರಚನೆಯೊಳ್ ಕರುಳ್ಗಲ ಸವಣಂ॥'

ಎಂದು ಆತ್ಮಪ್ರಶಂಸೆಯನ್ನು ಮಾಡಿಕೊಂಡ ಪೊನ್ನ ತನ್ನ ಕೃತಿಯಲ್ಲಿ ಕಾಳಿದಾಸನನ್ನು ಯಥಾವತ್ತಾಗಿ ಅನುಸರಿಸಿದ್ದಾನೆ. ಇದಕ್ಕೆ ಉದಾಹರಣೆಯಾಗಿ ಆತನ ಶಾಂತಿಪುರಾಣದ ಒಂದು ಪದ್ಯವನ್ನು ಗಮನಿಸಬಹುದು. ಸ್ವಯಂವರಕ್ಕೆಂದು ಆಗಮಿಸಿದ್ದ ರಾಜಕುಮಾರರುಗಳ ಕುರಿತ ಪ್ರವರ ಕೇಳಿ ಇಂದುಮತಿ ನಿರಾಕರಿಸಿದಂತೆಯೇ ಜ್ಯೋತಿಃಪ್ರಭೆಯೂ ನಿರಾಕರಿಸುತ್ತಾಳೆ.

ಲೀಲಾಬ್ಜಮಮ ಕರೋದ್ಧೃತ  
ನಾಲಮನಂತಃ ಪರಾಗಪರಿವೇಷಮನಾ  
ಲೋಲದಳನಿಹತ ಮಧುಕರ  
ಮಾಲೆಯನೋರ್ವಂ ತಗುಳ್ದು ತಿರುಪಿದನಾಗಳ್॥  
(ಶಾಂತಿಪುರಾಣ)

ಹೀಗೆ ಪೊನ್ನನ ಹೆಜ್ಜೆ ಹೆಜ್ಜೆಯಲ್ಲೂ ಕಾಳಿದಾಸನನ್ನು ಕಾಣಬಹುದಾಗಿದೆ. ಅಂತೆಯೇ 'ಪುರಾಣಮಿತ್ಯೇವ ನ ಸಾಧುಸರ್ವಂ' ಎಂಬ ಕಾಳಿದಾಸನ ಶ್ಲೋಕವನ್ನು ರನ್ನನು ತನ್ನ ಸಾಹಸಭೀಮವಿಜಯದಲ್ಲಿ,

ಪುರಾಣಮಿತ್ಯೇವ ನ ಸಾಧು ಸರ್ವಂ  
ನ ಚಾಪಿ ಕಾವ್ಯಂ ನವಮಿತ್ಯವದ್ಯಂ  
ಸಂತಃ ಪರೀಕ್ಷ್ಯಾನ್ಯತರದ್ಭಜಂತೇ  
ಮೂಢಃ ಪರಪ್ರತ್ಯಯನೇಯಬುದ್ಧಿಃ॥

ಎಂಬ ಕವಿ ಕಾಳಿದಾಸಕೃತ ಪದ್ಯವನ್ನು

ಕವಿಗಳೊಳಾ ಪುರಾಣಕವಿಪುಂಗವರೊಳ್ಳಿದರೀಗಳಿಲ್ಲ ಸ  
ತ್ಕವಿಗಳೆ ನಲ್ಲೆವೇಡವರ ಪೋದೊಡವಂದಿರ ಕಬ್ಬಮಿನ್ನು ಮ  
ರ್ಪುವು ಗುಣದೋಷಮಂ ನಿಕಷಮಿಟ್ಟು ಪರೀಕ್ಷಿಸಿ ನೋಡೆತಾವೆಪೇ  
ಳಿವೆ ಬುಧರಿರ್ದುನೋಮ್ಪಿದು ಪುರಾರ್ತನೂತನ ಕಾವ್ಯರೇಖೆಯಂ॥  
(ಸಾಹಸಭೀಮ ವಿಜಯ)

ಎಂದು ನಿರೂಪಿಸಿದ್ದಾರೆ.

ಮಾರ್ಗಕವಿಗಳು ಕಾಳಿದಾಸನ ಕೃತಿಗಳನ್ನು ಅನುಸರಿಸಿದ ರೀತಿಯಲ್ಲಿ ದೇಸಿ ಕವಿಗಳು ಅನುಸರಿಸದಿದ್ದರೂ ಆತನಿಗೆ ತಮ್ಮ ಗೌರವವನ್ನು ಸಲ್ಲಿಸುವಲ್ಲಿ ಪ್ರಾಮಾಣಿಕವಾಗಿ ನಡೆದುಕೊಂಡಿದ್ದಾರೆ. ಬಿ. ಎಂ. ಶ್ರೀಯವರ ಇಂಗ್ಲಿಷ್ ಗೀತೆಗಳಿಂದ ಪ್ರಭಾವಿತರಾದ ನವೋದಯ ಕಾಲದ ಕವಿಗಳೂ ಕಾಳಿದಾಸಾದಿ ಪ್ರಾಚೀನ ಕವಿಗಳಿಗೆ ತಮ್ಮ ಗೌರವವನ್ನು ಸಲ್ಲಿಸಿದ್ದಾರೆ. ಆಸ್ಥಾನ ವಿದ್ವಾಂಸರಾದ ಬಸವಪ್ಪ ಶಾಸ್ತ್ರಿ, ಶ್ರೀ ಕಂಠೇಗೌಡ ಮೊದಲಾದವರು ಕಾಳಿದಾಸನ ಕೃತಿಗಳನ್ನು

*PAGE DONATED BY : SHRI ROKESH HEGDE, DAHISAR & FAMILY*

ಕನ್ನಡೀಕರಿಸಿದರು. ಇಪ್ಪತ್ತನೆಯ ಶತಮಾನದ ಆಧುನಿಕ ಕನ್ನಡ ಕವಿಗಳಾದ ಮಾಸ್ತಿ, ಬೇಂದ್ರೆ, ಕುವೆಂಪು, ಪು. ತಿ. ನ, ಡಿ. ವಿ. ಜಿ, ಕಮಗೋಡು ನರಸಿಂಹ ಶಾಸ್ತ್ರಿ, ವೈ. ನಾಗೇಶ್ ಶಾಸ್ತ್ರಿ, ಎಂ. ಜಿ. ನಂಜುಂಡರಾಧ್ಯ, ಎಸ್. ವಿ. ಪರಮೇಶ್ವರ ಭಟ್ ಮೊದಲಾದವರು ಕಾಳಿದಾಸನ ಕಾವ್ಯಗಳಿಂದ ಪ್ರೇರಣೆಯನ್ನು ಪಡೆದುಕೊಂಡವರಾಗಿದ್ದಾರೆ. ಪಿ. ಬಸವಣ್ಣ, ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ, ಅಗ್ರಹಾರ ನಾ. ಶರ್ಮಾ, ಬುರುಗನಹಳ್ಳಿ ಭೀಮಸೇನ ಶರ್ಮಾ, ಗಣಪತಿ ಮೊಳೆಯಾರ, ದೇವುಡು, ಸಾಲಿ ರಾಮಚಂದ್ರರಾಯ, ಪಾಲೆಪ್ಪಾಡಿ, ಅ. ರಾ. ಮಿತ್ರ, ದ. ರಾ. ಬೇಂದ್ರೆ, ಎಸ್. ವಿ. ಪರಮೇಶ್ವರ ಭಟ್ ಮೊದಲಾದವರು ಕಾಳಿದಾಸನ ಮೇಘದೂತ ಕಾವ್ಯವನ್ನು ಕನ್ನಡಿಸಿದ್ದಾರೆ. ಆಸ್ಥಾನ ವಿದ್ವಾಂಸ ಮಂಡಿಕಲ್ ರಾಮಶಾಸ್ತ್ರಿಯವರು ಕಾಳಿದಾಸನ ಮೇಘದೂತವನ್ನನುಸರಿಸಿ ಮೇಘ ಪ್ರತಿಸಂದೇಶವೆಂಬ ಕಾವ್ಯವನ್ನು ರಚಿಸಿದ್ದಾರೆ.

ಮಹಾಕವಿ ಕಾಳಿದಾಸನ ಪ್ರಭಾವದಿಂದ ಅಂಬಿಕಾತನಯದತ್ತರ ಯಕ್ಷ ಯಕ್ಷಿ ರೂಪಕ, ಹೊಸ್ತೋಟ ಮಂಜುನಾಥ ಭಾಗ್ವತ್ ಅವರ ಯಕ್ಷಗಾನ ಏಕವ್ಯಕ್ತಿ ಪ್ರಯೋಗ, ಅಷ್ಟಾವಧಾನಿ ಆರ್. ಗಣೇಶ್‌ರವರು ರಚಿಸಿದ ಧೂಮದೂತ, ವಿದ್ವಾನ್ ಉಮಾಕಾಂತ ಭಟ್‌ರವರ ವಿರಚಿತ ಯಕ್ಷಗಾನ ಮೇಘದೂತ - ಇವೇ ಮೊದಲಾದ ಹಲವಾರು ನೂತನ ರೂಪಾಂತರ ಕೃತಿಗಳು ಕನ್ನಡ ಸಾಹಿತ್ಯದಲ್ಲಿ ಮೈದಾಳಿ ನಿಂತಿವೆ. ಹೀಗೆ ಕನ್ನಡ ಕವಿಗಳ ಮೇಲೆ ಕಾಳಿದಾಸನ ಪ್ರಭಾವ ಅಪರಿಮಿತವಾದುದು, ಅನನ್ಯವಾದುದು.


UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*


## ಸ್ವರ್ಣವಲ್ಲಿ ಸೇವಾ ಪರಿಷತ್, ಮುಂಬಯಿ

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳು ಸೋಂದಾ ಸ್ವರ್ಣವಲ್ಲಿ ಮಠ ಇವರ ಚಾತುರ್ಮಾಸ ವ್ರತಾಚರಣೆಯು ಆಷಾಡ ಶುಕ್ಲ ಪೂರ್ಣಿಮೆ ದಿನಾಂಕ 9.7.2017 ರ ರವಿವಾರ ದಂದು ಸ್ವರ್ಣವಲ್ಲಿ ಸೋಂದಾ ಮಠದಲ್ಲಿ ವ್ಯಾಸ ಪೂಜೆಯಿಂದ ಪ್ರಾರಂಭಗೊಂಡು ಭಾದ್ರಪದ ಶುಕ್ಲ ಹುಣ್ಣಿಮೆ ಬುಧವಾರ ದಿನಾಂಕ 6.9.2017ರ ವರೆಗೆ ನಡೆಯಲಿದೆ. ಈ ಸಂದರ್ಭದಲ್ಲಿ ಅನೇಕ ಧಾರ್ಮಿಕ ಕಾರ್ಯಕ್ರಮಗಳು ಜರಗಲಿದ್ದು, ಸೇವಾ ಕಾರ್ಯಗಳಿಗೂ ಅವಕಾಶಗಳಿವೆ. ಶಿಷ್ಯರೆಲ್ಲರೂ ಈ ಸುಸಂದರ್ಭದಲ್ಲಿ ಸದವಕಾಶಗಳ ಸದುಪಯೋಗವನ್ನು ಪಡೆಯಬಹುದಾಗಿದೆ.

★★★

ಶ್ರೀಗಳ ಆದೇಶದಂತೆ ಶ್ರಾವಣ ಶುಕ್ಲ ದ್ವಾದಶಿ ಶುಕ್ರವಾರ ದಿನಾಂಕ 4.8.2017ರಂದು ಶ್ರೀ ವರಮಹಾಲಕ್ಷ್ಮೀ ಪೂಜೆಯನ್ನು ಆಯೋಜಿಸಲಾಗಿದೆ. ಸಾಂತಾಕ್ರೂಜ್ ಪೂರ್ವದ ಪೇಜಾವರ ಮಠದಲ್ಲಿ ಮತ್ತು ಡೊಂಬಿವಲಿ ಹವ್ಯಕ ಮೆಡಿಕಲ್ ಸೆಂಟರಿನಲ್ಲಿ ಈ ಕಾರ್ಯಕ್ರಮವು ನಡೆಯಲಿದೆ. ಪೂಜೆಯಲ್ಲಿ ಪಾಲ್ಗೊಳ್ಳುವವರು ಪಂಚ ಪಾತ್ರೆ, ಕಲಶ, ಕುಂಕುಮಾರ್ಚನೆ ಸಾಮಗ್ರಿಗಳನ್ನು ತಮ್ಮೊಂದಿಗೆ ತರತಕ್ಕದ್ದು ಬಾಗಿನ ಸಾಮಾಗ್ರಿಗಳನ್ನು ಒದಗಿಸ ಲಾಗುವುದು. ಈ ಪ್ರಯುಕ್ತ ದೇಣಿಗೆ ಪ್ರತಿ ಸಂಕಲ್ಪಕ್ಕೆ 301/- ರೂಪಾಯಿ ನಿಗದಿಸಲಾಗಿದೆ. ಶಿಷ್ಯರೆಲ್ಲರೂ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶ್ರೀ ದೇವಿಯ ಮತ್ತು ಸ್ವಾಮಿಗಳ ಆಶೀರ್ವಾದಕ್ಕೆ ಪಾತ್ರರಾಗಬೇಕಾಗಿ ವಿನಂತಿ.

*ಹೆಚ್ಚಿನ ವಿವರಗಳಿಗೆ ಸಂಪರ್ಕಿಸಲು*

ಶ್ರೀ ವಿ. ಎನ್ ಹೆಗಡೆ - **8369576755 / 9869007333**
ಶ್ರೀ ಕೆ. ಸಿ. ಹೆಗಡೆ - **9869074115 / 8169515822**
ಶ್ರೀಮತಿ ಹೇಮಾ ಹೆಗಡೆ - **9869444454**
ಶ್ರೀಮತಿ ಗೌರಿ ಭಟ್ಟ - **7021938857**

*ವಿ. ಸೂ.:* ಮುಂಚಿತವಾಗಿ ಹೆಸರು ನೋಂದಾಯಿಸಿ ಆಯೋಜಕರಿಗೆ ಸಹಕರಿಸಬೇಕಾಗಿ ಕೋರಿಕೆ.

## Vacancy

There are two vacancies for students in Havyaka Boys Hostel at Dombivli.

***Those who are interested may please contact :***
**HWT Office, Kalina 022 - 26652591,**
**Dombivli - 0251 - 2487291,**
**Shri G. V. Hegde - 9167434626,**
**Jaya Bhat - 9987977330**

*PAGE DONATED BY : SHRI ANANT GANESH BHAT, BANDRA & FAMILY*

# ನಿಮ್ಮ ಟೂತ್ ಪೇಸ್ಟಿನಲ್ಲಿ ಉಪ್ಪಿದೆಯೇ?

✍ ಶಶಿಕಲಾ ಹೆಗಡೆ

ಈ ದಿನಗಳಲ್ಲಿ ಚಿತ್ರವಿಚಿತ್ರ ಜಾಹೀರಾತುಗಳನ್ನು ಟಿ.ವಿಯಲ್ಲಿ ನೋಡುತ್ತಿರುತ್ತೇವೆ. ಸಾಲಿಗ್ರಾಮದಷ್ಟು ಕಪ್ಪಗಿರುವ ಹುಡುಗಿಯೊಬ್ಬಳು ಕ್ರೀಮನ್ನು ಹಚ್ಚುವುದರಿಂದ ಬಿಳಿ ಹಂಸದಷ್ಟು ಬೆಳ್ಳಗಾಗಿ ಚಿತ್ರತಾರೆಯಾಗಿ ಮೆರಸುತ್ತುತ್ತಾ ಹಾಡುವ ಚಿತ್ರವನ್ನು ಭಿತ್ತರಿಸುವ ಜಾಹೀರಾತು ಎಷ್ಟೋ ಶ್ಯಾಮಲ ವರ್ಣದ ಹುಡುಗಿಯರ ಮನಸ್ಸಿನ ಭಾವನೆಯನ್ನು ಕೆಣಕಿ ಹಗಲುಗನಸು ಕಾಣುವಂತೆ ಮಾಡಿದೆಯೋ ಏನೋ.

ಮತ್ತೊಂದು ಜಾಹೀರಾತಿನಲ್ಲಿ ಬೋಳು ತಲೆಯ ವ್ಯಕ್ತಿಯೊಬ್ಬನು ತಲೆಯ ಮೇಲೆ ಕೈಯಾಡಿಸುತ್ತಾ ಚಿಂತಾಗ್ರಸ್ಥನಾಗಿರುವಾಗ ಅಶರೀರವಾಣಿಯೊಂದು ಕೇಳಿಬರುತ್ತದೆ. 'ನಿಮ್ಮ ತಲೆಯಲ್ಲಿ ದಟ್ಟವಾದ ಕಪ್ಪಗಿನ ಕೂದಲು ಹಾರಾಡಬೇಕೇ? ಹಾಗಾದರೆ ಇಂದೇ ಕೊಂಡು ತನ್ನಿ. ಟೋಪಿ ತೈಲವನ್ನು.' ತೈಲವನ್ನು ಬಳಸಿದ ಮರುಕ್ಷಣವೇ ಬೋಳುತಲೆಯಲ್ಲಿ ಹಾರಾಡುವ ಕಪ್ಪಗಿನ ಕೂದಲು! ಈ ಜಾಹೀರಾತನ್ನು ನೋಡಿದ ಕೂದಲಿಲ್ಲದ ಯಾರೇ ಆದರೂ ತಮ್ಮ ಬಕ್ಕತಲೆಯಲ್ಲಿ ಮೂಡಿ ಬರಲಿರುವ ಕೂದಲಿಗಾಗಿ ಹಂಬಲಿಸಿ,ಹಪಹಪಿಸಿ ದುಬಾರಿಯಾದ ತೈಲವನ್ನು ಖರೀದಿಸಿ ಟೋಪಿ ಹಾಕಿಸಿಕೊಳ್ಳುವುದು ಖಂಡಿತ.

ಯಾವುದಾದರೊಂದು ಕಾರ್ಯಕ್ರಮ ನೋಡಲು ಟಿ.ವಿ ಮುಂದೆ ಕುಳಿತರೆ ಅರ್ಧದಷ್ಟು ಸಮಯ ಜಾಹೀರಾತಿನ ವೀಕ್ಷಣೆಯಲ್ಲಿ ವ್ಯರ್ಥವಾಗುತ್ತದೆ. ದೊಡ್ಡ ಕಾರು, ಯಂತ್ರೋಪಕರಣಗಳಿಂದ ಹಿಡಿದು ಕೊನೆಗೆ ಸೂಜಿದಾರದವರೆಗೂ ಜಾಹೀರಾತುಗಳು. ಜನರಿಗೆ ಆಸೆ ಹುಟ್ಟಿಸಿ ಹೊಟ್ಟೆಬಿರಿಯುವಂತೆ ತಿನ್ನಿಸಲು ಆಸೆ ಮೂಡಿಸುವ ಹಲವು ತಿಂಡಿಗಳ ಜಾಹೀರಾತುಗಳು ಒಂದೆಡೆಯಾದರೆ ಅವರ ಹೆಚ್ಚಿದ ಬೊಜ್ಜು ಮೈಯನ್ನು ಕರಗಿಸಲು ಕೂಡ ಬೇರೊಂದು ಜಾಹೀರಾತಿನ ಬಿತ್ತರವಾಗುತ್ತಿರುತ್ತದೆ. ಒಟ್ಟಿನಲ್ಲಿ ಜನರು ಕಷ್ಟಪಟ್ಟು ಗಳಿಸಿದ ಹಣ ಬ್ಯಾಂಕಿನಲ್ಲಿಡುವುದೇನು ಜೇಬಿನಲ್ಲಿ ಕೂಡ ಇರಿಸಲು ಕೊಡದಂತೆ ಅವರೆದುರಿಗೆ ಆಕರ್ಷಣೆಯನ್ನು ತೋರಿಸಿ ಕರಗಿ ಹೋಗುವಂತೆ ಮಾಡುವುದು ಇಂದಿನ ಬಣ್ಣ ಬಣ್ಣದ ಜಾಹೀರಾತುಗಳ ಕೆಲಸ.

ಈ ಎಲ್ಲಾ ಜಾಹೀರಾತುಗಳ ಮಧ್ಯೆ ನನ್ನ ಗಮನವನ್ನು ಹೆಚ್ಚಾಗಿ ಸೆಳೆದದ್ದು 'ನಿಮ್ಮ ಟೂತ್‌ಪೇಸ್ಟಿನಲ್ಲಿ ಉಪ್ಪಿದೆಯೇ?' ಎನ್ನುವ ಜಾಹೀರಾತು. ಹೌದಲ್ಲವೇ? ನಾವೆಲ್ಲಾ ಸಣ್ಣವರಿದ್ದಾಗ ತೆಂಗಿನ ನಾರಿಗೆ ಇಂಗಾಳದ ಹುಡಿಯನ್ನು (ಮಸಿ ಹುಡಿ) ಸೇರಿಸಿ ಹಲ್ಲುಜ್ಜುತ್ತಿದ್ದೆವು. ಅದೂ ಸ್ವಲ್ಪ ಉಪ್ಪು ಉಪ್ಪಾಗಿರುತ್ತಿತ್ತು. ಆಗ ನಮ್ಮ ಹಲ್ಲು ಹೇಗೆ ಥಳಥಳನೇ ಮುತ್ತಿನಂತೆ ಹೊಳೆಯುತ್ತಿತ್ತು. ರಾತ್ರಿಯಲ್ಲಿ ನಾವು ಬಾಯಿ ತೆರೆದರೆ ಬೆಳಕಾಗುವಷ್ಟು ಬಿಳಿ ನಮ್ಮ ಹಲ್ಲು. ಇಲ್ಲಿ ಉತ್ಪ್ರೇಕ್ಷೆ ಸ್ವಲ್ಪ ಹೆಚ್ಚಾಯಿತಲ್ಲವೇ? ಆದರೂ ನಮ್ಮ ಹಲ್ಲುಗಳು ಬೆಳ್ಳಗೆ ಹೊಳೆಯುತ್ತಿದ್ದುದಂತೂ ಸುಳ್ಳಲ್ಲ. ಸ್ವಲ್ಪ ದೊಡ್ಡವರಾಗಿ ಹೈಸ್ಕೂಲ್, ಕಾಲೇಜು ಮೆಟ್ಟಲುಗಳನ್ನು ಹತ್ತಿದಾಗ ನಮ್ಮ ಕೈಗೆ ಬಂದದ್ದು ಟೂತ್‌ಪೇಸ್ಟ್ ಮತ್ತು ಬ್ರಶ್. ಬಹುಶಃ ಆಗಿನಿಂದಲೇ ನಮ್ಮ ಅಚ್ಚ ಬಿಳಿಯ ಹಲ್ಲಿನ ಬಣ್ಣ ಮಾಸತೊಡಗಿ ಸಾವಕಾಶವಾಗಿ ಹಳದಿ ಬಣ್ಣದತ್ತ ತಿರುಗ ತೊಡಗಿದ್ದು, ಕಬ್ಬಿಣದಂತೆ ಗಟ್ಟಿಯಾದ ನಮ್ಮ ಹಲ್ಲುಗಳು ಸಡಿಲವಾಗ ತೊಡಗಿದ್ದು. ನನಗ್ಯಾಕೋ ದಟ್ಟವಾದ ಅನುಮಾನ, ಈ ಟೂತ್ ಪೇಸ್ಟ್ ಕಂಪನಿ ಮತ್ತು ದಂತವೈದ್ಯರ ನಡುವೆ ಏನಾದರೂ ಒಪ್ಪಂದ ಇದೆಯೋ ಏನೋ. 'ನಮ್ಮ ಟೂತ್‌ಪೇಸ್ಟ್ ಉಪಯೋಗಿಸಿ ಜನಸಾಮಾನ್ಯರ ಹಲ್ಲು ಹಾಳಾಗುವಂತೆ ಮಾಡಿ, ನಿಮಗೆ ದಂತರೋಗಿಗಳ ಸಂಖ್ಯೆ ಹೆಚ್ಚಾಗುವಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದು' ಎಂದು.

ಅಯ್ಯೋ ಟೂತ್‌ಪೇಸ್ಟ್‌ನಲ್ಲಿ ಉಪ್ಪಿರುವ ವಿಷಯವನ್ನೇ ಮರೆತೆವಲ್ಲವೇ. ನಾನಂತೂ ಆ ಜಾಹೀರಾತು ನೋಡಿದ ದಿನವೇ ನಿರ್ಧಾರ ಮಾಡಿದೆ - ನಾನು ಈ ಟೂತ್‌ಪೇಸ್ಟನ್ನು ಸರ್ವಥಾ ಖರೀದಿಸುವುದಿಲ್ಲ ವೆಂದು. ಇವರು ಹತ್ತು ಪೈಸೆಯ ಉಪ್ಪನ್ನು ಉಪಯೋಗಿಸಿ ಪೇಸ್ಟಿನ ಬೆಲೆಯನ್ನು ಹತ್ತು ರೂಪಾಯಿಯಾದರೂ ಹೆಚ್ಚಿಸಿರುತ್ತಾರೆ.

ಜಾಹೀರಾತಿನಲ್ಲಿರುವ ಚಂದದ ರೂಪದರ್ಶಿಗೆ ಎಷ್ಟು ಹಣ ಸುರಿದಿದ್ದಾರೋ ಏನೋ? ಅವಳಂತೂ ಟೂತ್‌ಪೇಸ್ಟ್ ತೆಗೆದುಕೊಂಡು ಓಡಾಡುವವರನ್ನೇ ಮಾತನಾಡಿಸುತ್ತಾಳೆ. ಇರಲಿ ಬಿಡಿ. ನಮ್ಮ ಹಲ್ಲುಗಳ ಸದೃಢ ಆರೋಗ್ಯಕ್ಕೆ ಉಪ್ಪು ಬೇಕೇ ಬೇಕು ಎಂದಾದರೆ ನಾವು ಇವರ ಟೂತ್‌ಪೇಸ್ಟನ್ನೇ ಯಾಕೆ ಖರೀದಿಸಬೇಕು? ಸಾಧಾರಣ ಪೇಸ್ಟನ್ನು ಖರೀದಿಸಿ ಮನೆಯಲ್ಲಿರುವ ಉಪ್ಪನ್ನು ಅದರ ಮೇಲೆ ಉದುರಿಸಿ ಹಲ್ಲುಜ್ಜ ಬಹುದಲ್ಲವೇ?

ಮೊನ್ನೆ ಮೊನ್ನೆ ಹೊಸ ಜಾಹೀರಾತನ್ನು ನೋಡಿದೆ. ಅದರಲ್ಲಿ ಟೂತ್‌ಪೇಸ್ಟಿನಲ್ಲಿ ಉಪ್ಪಿನ ಜೊತೆಗೆ ಲವಂಗ, ತುಳಸಿ, ಕರ್ಪೂರ, ನೀಲಗಿರಿ ಜೊತೆಗೆ ಓಮ?? ಕೂಡ ಇರುವುದಾಗಿ ಸಾರಿ ಸಾರಿ ಹೇಳುತ್ತಿದ್ದರು. ಇನ್ನು ಸ್ವಲ್ಪವೇ ದಿನಗಳಲ್ಲಿ ಟೂತ್‌ಪೇಸ್ಟಿನಲ್ಲಿ ಹತ್ತು ಎಸಳು ಬೆಳ್ಳುಳ್ಳಿ, ನಾಲ್ಕು ಇಂಚು ಶುಂಠಿ, ಮೆಣಸಿನ ಪುಡಿ, ಸ್ವಲ್ಪ ದಾಲ್ಚಿನ್ನಿ ಇವೆಲ್ಲ ಬೆರೆಸಿದ ಪೇಸ್ಟ್ ಮಾರ್ಕೆಟ್‌ಗೆ ಬರಬಹುದು. ಆದಿನ ಎಂದು ಬಂದೀತೆಂದು ನಾನು ಎದುರು ನೋಡುತ್ತಿದ್ದೇನೆ. ಅಂತಹ ಟೂತ್ ಪೇಸ್ಟನ್ನು ಖಂಡಿತ ಖರೀದಿಸುವ ಆಸೆ ನನ್ನದು. ಅದರಿಂದ ಹಲ್ಲುಜ್ಜಲಂತೂ ಖಂಡಿತ ಅಲ್ಲ. ಆದರೆ ಪಲ್ಯ ಮಾಡುವಾಗ ಬೇರೆ ಮಸಾಲೆ ರುಬ್ಬುವ ಗೋಜಿಗೆ ಹೋಗದೆ ಸ್ವಲ್ಪ ಟೂತ್‌ಪೇಸ್ಟನ್ನೇ ಮಿಕ್ಸ್ ಮಾಡಿದರೆ ಪಲ್ಯ ಬಹಳ ರುಚಿಯಾಗಬಹುದು.

ಇರಲಿ. ಟೂತ್‌ಪೇಸ್ಟಿನ ಪುರಾಣ ಬಹಳ ಉದ್ದವಾಯಿತು. ಇಂದು ಬೆಳಿಗ್ಗೆಯೇ ನಮ್ಮ ಮನೆಯಲ್ಲಿ ಟೂತ್‌ಪೇಸ್ಟ್ ಮುಗಿದಿತ್ತು. ಹೊಸತನ್ನು ತನ್ನಿರಿ ಎಂದು ನಮ್ಮ ಮನೆಯವರಿಗೆ ಹೇಳಿದ್ದೆ. ಯಾವುದನ್ನು ತಂದಿದ್ದಾರೋ ಏನೋ? ನನ್ನ ಹಲ್ಲುಗಳ ಭಾಗ್ಯದಲ್ಲಿ ನಾಳೆ ಬೆಳಿಗ್ಗೆ ಯಾವ ಪೇಸ್ಟಿನ ಯೋಗ ಬರೆದಿದೆಯೋ ಏನೋ?

*PAGE DONATED BY : SMT. KALA BHAGWAT, KHARGAR IN MEMORY OF MOTHER LATE SMT. GOURI BHAT*

# HAVYAKA WELFARE TRUST, WOMEN WELFARE CELL

## APPLICATION FORM - EDUCATIONAL AID

*(Students are requested to fill up the form in neat legible handwriting to obtain educational aid. Forms should reach our office before 30th Sept. 2017. Application form should be accompanied by recommendation letter)*

*DATE :* ______________________

Name : ______________________________________________

(Surname) (First name) (Middle/Father's/Husband's name)

Sex : Male / Female Date of Birth : ______________

Permanent Address : ______________________________________________

______________________________________________

Pin code : ____________ Contact Nos : ______________________________

**Family Detail :**

| | Father / Guardian | Mother / Guardian |
|---|---|---|
| Name | | |
| Age | | |
| Occupation | | |
| Contact Nos. | | |
| Signature | | |

**Education Detail :**

Name of last examination given : ______________________________

Marks obtained : ________/________ Percentage obtained : ________%

Present study course being undertaken and Name of university :

______________________________________________

______________________________________________

Approximate cost : (in Rupees)

Tuition fees :______________/year Books & Stationery :______________/year

Lodging & Boarding :______________/year Misc/Personal :______________/year

Signature of applicant : ______________________________

**RECOMMENDATION DETAILS :**

Name : ______________________________ Contact nos. : ______________

Email : ______________________________

Signature of Referee

Documents to submitted with application form: (*cancelled documents will not be accepted*)

Photo & Address proof (Passport/Birth certificate/UID (Aadhaar card))
Educational documents (Mark Sheets/Admission letter duly attested)
Income Certificate

*PAGE DONATED BY : **SMT. MADHU AND SHRI S. M. HEGDE,** SANTACRUZ*

## ಹವ್ಯಕ ವೆಲ್ಫೇರ್ ಟ್ರಸ್ಟ್ ಮುಂಬಯಿ, ಕರ್ನಾಟಕ ಮಲ್ಲ ದೈನಿಕ: ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿ ಪ್ರದಾನ - 2017

# ಮಾಧ್ಯಮದ ಸಮರ್ಥ ಬಳಕೆಯಿಂದ ಆರೋಗ್ಯಕರ ಸಮಾಜ ನಿರ್ಮಾಣ - ಎಲ್. ಎಸ್.ಶಾಸ್ತ್ರಿ

'ಪತ್ರಕರ್ತರು ನಿರ್ಣಯ ಕೊಡಲು ನ್ಯಾಯಾಧೀಶರಲ್ಲ. ಇನ್ನೊಬ್ಬರ ಚಾರಿತ್ರ್ಯ ವಧೆಯ ಹಕ್ಕು ಪತ್ರಕರ್ತರಿಗಿಲ್ಲ. ಮಾಧ್ಯಮ ಎನ್ನುವುದು ಬಲಿಷ್ಠವಾದುದು, ಪರಿಣಾಮಕಾರಿಯಾದುದು. ಅದನ್ನು ಸಮರ್ಥವಾಗಿ ಬಳಸಿಕೊಂಡಾಗ ಮಾತ್ರ ಆರೋಗ್ಯಕರ ಸಮಾಜದ ನಿರ್ಮಾಣವಾಗುತ್ತದೆ' ಎಂದು ಹಿರಿಯ ಪತ್ರಕರ್ತ, ಸಾಹಿತಿ ಬೆಳಗಾವಿಯ ಎಲ್. ಎಸ್. ಶಾಸ್ತ್ರಿಯವರು ನುಡಿದರು.

ಹವ್ಯಕ ವೆಲ್ಫೇರ್ ಟ್ರಸ್ಟ್ (ರಿ) ಮುಂಬಯಿ ಇವರು ಕರ್ನಾಟಕ ಮಲ್ಲ ಕನ್ನಡ ದೈನಿಕ ಮುಂಬಯಿ ಅವರ ಸಹಕಾರದೊಂದಿಗೆ ಜೂ. 18 ರಂದು ಬೆಳಿಗ್ಗೆ ಘಾಟ್ಕೋಪರ್ ಪಶ್ಚಿಮದ ದೀಪ್ತಿ ಸೊಲಿಟೇರ್‌ನ ಹವ್ಯಕರ ಸಭಾಗೃಹದಲ್ಲಿ ಹಮ್ಮಿಕೊಂಡ ವಾರ್ಷಿಕ ಕಾರ್ಯಕ್ರಮ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದರು.

'ಕನ್ನಡ ಪತ್ರಿಕೋದ್ಯಮ ಆರಂಭವಾಗಿ ಅರುವತ್ತು ವರ್ಷದ ತನಕ ಬರೆಯಲು ಗೊತ್ತಿಲ್ಲದವರು ಪತ್ರಿಕಾ ರಂಗಕ್ಕೆ ಬರುತ್ತಿರಲಿಲ್ಲ. ಆವಾಗ ನಿರ್ದಿಷ್ಟವಾದ ಆದರ್ಶವಿತ್ತು. ಪತ್ರಿಕೋದ್ಯಮಕ್ಕೆ, ಸಮಾಜಕ್ಕೆ ಧರ್ಮ-ಶಿಕ್ಷಣ-ನೈತಿಕತೆ... ಇತ್ಯಾದಿ ಸದುದ್ದೇಶಗಳನ್ನು ನೀಡುವ ನೀತಿ ಇತ್ತು. ಅವಾಗಿನ ಸಂಪಾದಕರು ಪ್ರಾಮಾಣಿಕರೂ-ಸಚ್ಚಾರಿತ್ರರೂ ಆಗಿದ್ದರು. ಇಂದು ತಾಂತ್ರಿಕ ಪ್ರಗತಿಯಿಂದ ಪತ್ರಿಕೋದ್ಯಮ ವಿಶಾಲವಾಗಿ ಬೆಳೆದಿದೆ. ಆದರೆ ಪರಿಸ್ಥಿತಿ ಗಂಭೀರವಾಗಿದೆ. ಭಾಷಾಶುದ್ಧಿಗೆ ಇಂದು ಗಮನ ಕೊಡುವುದಿಲ್ಲ' ಎಂದು ವಿಷಾದಿಸಿ ಎಲ್. ಎಸ್. ಶಾಸ್ತ್ರಿಗಳು, 'ನನಗೆ ಸಿಕ್ಕಿದ ಪ್ರಶಸ್ತಿಗಳಲ್ಲಿ ಎರಡು ಮುಖ್ಯವಾಗಿವೆ. ಗಣಪತಿ ರಾವ್ ಪಾಂಡೇಶ್ವರ ಪ್ರಶಸ್ತಿ ಮತ್ತು ಇಂದು ದೊರೆತ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿಗಳು ಹೆಚ್ಚು ಖುಷಿ ನೀಡಿವೆ. 60ನೇ ದಶಕದಲ್ಲಿ ತಾನು ಕರ್ಕಿಯವರ 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ' ನಾಟಕದಲ್ಲಿ ಪಾತ್ರ ನಿರ್ವಹಿಸಿದ್ದೆ. ಇಂದು ಅವರ ಹೆಸರಿನ ಪ್ರಶಸ್ತಿ ಸ್ವೀಕರಿಸಿ ಧನ್ಯನಾದೆ. ನನಗೆ ಪತ್ರಿಕೋದ್ಯಮ ಆರ್ಥಿಕ ಬಲ ಕೊಟ್ಟಿಲ್ಲದಿದ್ದರೂ ಮಾನಸಿಕ ಬಲವನ್ನು ನೀಡಿದೆ. ನಾನು ಪತ್ರಿಕೋದ್ಯಮವನ್ನು ತುಂಬಾ ಪ್ರೀತಿಸಿದೆ' ಎಂದು ಧನ್ಯತಾ ಭಾವ ವ್ಯಕ್ತಪಡಿಸಿದರು. ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರು ನಗದು, ಶಾಲು, ಸ್ಮರಣಿಕೆ, ಫಲಪುಷ್ಪಗಳೊಂದಿಗೆ ಪ್ರಶಸ್ತಿಯನ್ನು ಪ್ರದಾನಿಸಿದರು.

ಅಭಿನಂದನ ಭಾಷಣ ಮಾಡಿದ ಹಿರಿಯ ಪತ್ರಕರ್ತ, ಸಾಹಿತಿ ಶಾ. ಮಂ. ಕೃಷ್ಣರಾವ್ ಅವರು ಕನ್ನಡದ ಕೆಲಸವನ್ನು ಕರ್ಕಿಯವರು ಆ ಕಾಲದಲ್ಲಿ ಮಾಡಿದರು. ಅಂದಿನ ಅವರ ಸಾಹಸ ಅಪೂರ್ವವಾದುದು. ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ ಸ್ಥಾಯಿ ಭಾವ ಇರುವ ಕೃತಿ. ಹಾಗಾಗಿಯೇ ಅದು ಉಳಿದುಕೊಂಡಿದೆ. ಅವರಂತೆಯೇ ಎಲ್. ಎಸ್. ಶಾಸ್ತ್ರಿಯವರೂ ಛಲವಾದಿ. ಕರ್ಕಿಯವರು ಕೇವಲ ಹವ್ಯಕರಲ್ಲ. ಅವರೊಬ್ಬ ಧೀರ ಕನ್ನಡಿಗ. ಅಂತೆಯೇ ತನ್ನ ಜೊತೆ ಇನ್ನೊಬ್ಬರನ್ನೂ ಬೆಳೆಸಬೇಕು ಎಂಬುದು ಶಾಸ್ತ್ರಿಯವರ ನಿಲುವು ಎಂದು ಅವರನ್ನು ಅಭಿನಂದಿಸಿದರು.

ಮುಖ್ಯ ಅತಿಥಿಗಳಾದ ಮುಂಬಯಿ ವಿ.ವಿ. ಕನ್ನಡ ವಿಭಾಗದ ನಿವೃತ್ತ ಮುಖ್ಯಸ್ಥ ಡಾ. ತಾಳ್ತಜೆ ವಸಂತಕುಮಾರ್ ಮಾತನಾಡುತ್ತಾ 'ಸಮಾಜ ಗುರುತಿಸುವಂತಹ ಸಾಂಸ್ಕೃತಿಕ ಮಾದರಿ ಕೆಲಸಗಳನ್ನು ಹವ್ಯಕರು ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದಲೇ ಕರ್ಕಿಯವರಿಗೆ ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ ಬರೆಯಲು ಸಾಧ್ಯವಾಯಿತು. ಅವರು ಕ್ರಿಯಾಶೀಲ ಲೇಖಕರಾಗಿದ್ದರು. ಹಾಗಾಗಿ ತಾನು ಯಾವ ಸಮಾಜದ ಹಿನ್ನೆಲೆಯಿಂದ ಬಂದಿರುವೆನೋ ಆ ಸಮಾಜದ ಒಂದು ಮಿತಿಯನ್ನೂ ಅವರು ತಮ್ಮ ಕೃತಿಯಲ್ಲಿ ಕಾಣಿಸಿದ್ದರು. ಅಂತಹ ಪರಂಪರೆಯ ಹಿರಿಯರನ್ನು ನಾವು ಸೀಮಿತಗೊಳಿಸುವುದು ಬೇಡ. ಇಂದು ವಲಸೆ ಹೋದವರು ಸಾಂಸ್ಕೃತಿಕವಾಗಿ ಏನನ್ನೋ ಕಳಕೊಳ್ಳುತ್ತಾ ಬರುತ್ತಿದ್ದಾರೆ. ಕನ್ನಡಿಗರು ಗುಣ ಮೌನಿಗಳಾಗಬಾರದು. ಅಂದರೆ ಅರ್ಥಕ್ಕೆ ದಾಸರಾಗದೆ ನಿಜವಾದ ದಾಸರನ್ನು ಗುರುತಿಸಿ ಸನ್ಮಾನಿಸಿರುವುದು ಇಂದು ಸಂತೋಷ ತಂದಿದೆ ಎಂದರು.

ಅಧ್ಯಕ್ಷತೆ ವಹಿಸಿದ ಟ್ರಸ್ಟ್‌ನ ಅಧ್ಯಕ್ಷ ಶಿವಕುಮಾರ್ ಭಾಗವತ್ ಮಾತನಾಡಿ ಕರ್ಕಿಯವರ ಅಂದಿನ ಸಾಧನೆಗಳು ಇಂದಿಗೂ ನಮಗೆಲ್ಲ ಮಾದರಿ. ಸಂವಿಧಾನದ ನಾಲ್ಕನೇ ಸ್ತಂಭ ಪತ್ರಿಕೋದ್ಯಮದಲ್ಲಿ ಕರ್ಕಿಯವರ ಸಾಧನೆ ಅಪಾರ. ಅಂತಹ ಸಾಧನೆಗೈದ ಎಲ್. ಎಸ್. ಶಾಸ್ತ್ರಿಯವರಿಗೆ ಇಂದು ಕರ್ಕಿ ಪ್ರಶಸ್ತಿ ದೊರೆತಿರುವುದು ಅಭಿಮಾನ ತಂದಿದೆ' ಎಂದರು.

'ಕರ್ನಾಟಕ ಮಲ್ಲ'ದ ಪರವಾಗಿ ವೇದಿಕೆಯಲ್ಲಿ ಉಪಸ್ಥಿತರಿದ್ದ ಉಪ ಸಂಪಾದಕ ಶ್ರೀನಿವಾಸ ಜೋಕಟ್ಟೆ ಮಾತನಾಡುತ್ತಾ 'ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಅವರಂತಹ ಅಪ್ರತಿಮ ಪತ್ರಕರ್ತರ ಹೆಸರಿನ ಈ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 'ಕರ್ನಾಟಕ ಮಲ್ಲ'ವೂ ಸಹಭಾಗಿತ್ವ ನೀಡಿರುವುದು ಸಂತೋಷದ ಸಂಗತಿ. ಹವ್ಯಕ ವೆಲ್ಫೇರ್ ಟ್ರಸ್ಟ್‌ನ ಕನ್ನಡ ಪರ ಕೆಲಸಗಳು ಪ್ರಶಂಸನೀಯ. ಶಾಸ್ತ್ರಿಯವರಂತಹ ದಕ್ಷ ಪತ್ರಕರ್ತರಿಗೆ ಈ ಪ್ರಶಸ್ತಿ ಸಂದಿರುವುದು ಹೆಮ್ಮೆಯ ಸಂಗತಿ. ಕರ್ನಾಟಕ ಮಲ್ಲವೂ ಈ ವರ್ಷ ಬೆಳ್ಳಿ ಹಬ್ಬದ ಸಂಭ್ರಮ ಆಚರಿಸಿದೆ' ಎಂದು ನೆನಪಿಸಿದರು.

ಆರಂಭದಲ್ಲಿ ಗಣ್ಯರಿಂದ ದೀಪ ಪ್ರಜ್ವಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಕಾವ್ಯಾ ಭಾಗವತ್ ಪ್ರಾರ್ಥನೆ ಹಾಡಿದರು. ತನುಜಾ ಹೆಗಡೆ ಸ್ವಾಗತಿಸಿದರು. 'ಹವ್ಯಕ ಸಂದೇಶ' ದ ಸಂಪಾದಕಿ ಅಮಿತಾ ಭಾಗವತ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪೂರ್ಣಿಮಾ ಅಕದಾಸ ಸನ್ಮಾನ ಪತ್ರ ವಾಚಿಸಿದರು. ಸಾ. ದಯಾ, ಕೇಶವ ಹೆಗಡೆ ಅತಿಥಿಗಳನ್ನು ಪರಿಚಯಿಸಿದರು. ಚಿದಾನಂದ ಭಾಗವತ್ ಶುಭ ಸಂದೇಶ ವಾಚಿಸಿದರು.

ಸಭಾ ಕಾರ್ಯಕ್ರಮವನ್ನು ಶಶಿಕಲಾ ಹೆಗಡೆ ನಿರೂಪಿಸಿದರು. ಮಹೇಶ್ ಹೆಗಡೆ ವಂದಿಸಿದರು. ಗೌ. ಕಾರ್ಯದರ್ಶಿ ಎನ್. ಆರ್. ಅಕದಾಸ, ಸಂಜಯ ಭಟ್ ಉಪಸ್ಥಿತರಿದ್ದು ಗಣ್ಯರನ್ನು ಸ್ವಾಗತಿಸಿದರು.

ಭೋಜನ ವಿರಾಮದ ನಂತರ ಮನೋರಂಜನೆಗಾಗಿ ಆಯೋಜಿಸಲಾದ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕು. ನೇಹಾ

*PAGE DONATED BY : SMT. SHANTA V. HEGDE, CARMICHAEL ROAD*

ಹೆಗಡೆ ತಮ್ಮ ಭರತನಾಟ್ಯ ನೃತ್ಯರೂಪಕದಲ್ಲಿ ದಕ್ಷಯಜ್ಞದ ಕಾಲದಲ್ಲಿಯ ಈಶ್ವರನಿಂದ ಹಿಡಿದು ಸಮುದ್ರ ಮಥನದ ಕಾಲದಲ್ಲಿಯ ವಿಷವನ್ನು ಕುಡಿದು ನೀಲಕಂಠನಾದ ಶಿವನ ಹಲವು ರೂಪಗಳನ್ನು ನಾಟ್ಯ ಭಂಗಿಗಳ ಮೂಲಕ ಸುಂದರವಾಗಿ ಪ್ರಸ್ತುತಪಡಿಸಿದರು.

ಜೆ. ಜಿ. ಕ್ರಿಯೇಶನ್ಸ್ ಬೆಂಗಳೂರು ಇವರ ವಿವಿಧ ವಿನೋದಾವಳಿ ಕಾರ್ಯಕ್ರಮದಲ್ಲಿ ಬಾಳೆಸರ ವಿನಾಯಕ ಅವರು ತಮ್ಮ ಹಾಸ್ಯ ಚಟಾಕಿಗಳಿಂದ ಜನರನ್ನು ನಗಿಸಿದರೆ, ಅವರ ಸಂಗಡಿಗರಾದ ಶ್ರೀಮತಿ ಆಶಾ ಹೆಗಡೆ ಮತ್ತು ಶ್ರೀ ವಿನಯ ತೋಟದಹಳ್ಳಿ ತಮ್ಮ ಸುಶ್ರಾವ್ಯ ಕಂಠದಿಂದ ಬಾಳೆಸರ ವಿನಾಯಕ ಅವರು ರಚಿಸಿದ ಹಾಸ್ಯ ಭರಿತ ಹಾಡುಗಳನ್ನು ಹಾಡಿ ಜನರನ್ನು ರಂಜಿಸಿದರು. ಈ ಹಾಸ್ಯ ಕಾರ್ಯಕ್ರಮದಲ್ಲಿ ಹಳ್ಳಿ ಮತ್ತು ಪಟ್ಟಣದ ದಿನನಿತ್ಯದ ಜೀವನದ ಹಾಸ್ಯಮಯ ಬದುಕಿನ ಚಿತ್ರಣ ಮೂಡಿ ಬಂದರೆ ಹಾಡುಗಳಲ್ಲಿ ಕೂಡ ಹಳ್ಳಿಯ ಜೀವನದ ಸೊಗಡು ರಸವತ್ತಾಗಿ ಹೊಮ್ಮುತ್ತಿತ್ತು.

ಹವ್ಯಕ ಭಾಷೆಯನ್ನು ಉಳಿಸಿ ಬೆಳೆಸುವ ಸದುದ್ದೇಶದಿಂದ ಬಾಳೆಸರ ವಿನಾಯಕ ಅವರು ಈ ಎಲ್ಲಾ ಹಾಸ್ಯ ಕಾರ್ಯಕ್ರಮಗಳನ್ನು ಹವ್ಯಕ ಭಾಷೆಯಲ್ಲಿಯೇ ನಡೆಸಿರುವುದು ಒಂದು ವಿಶೇಷವಾಗಿತ್ತು.

ಕೊನೆಯಲ್ಲಿ ಕುಮಾರಿ ನೇಹಾ, ಬಾಳೆಸರ ವಿನಾಯಕ ಮತ್ತು ತಂಡದವರಿಗೆ ಅಧ್ಯಕ್ಷರಾದ ಶ್ರೀ ಶಿವಕುಮಾರ್ ಭಾಗವತ್ ಅವರು ಶಾಲು, ಹೂಗುಚ್ಛ, ಸ್ಮರಣಿಕೆ ಮತ್ತು ಶ್ರೀಫಲಗಳನ್ನು ನೀಡಿ ಸನ್ಮಾನಿಸಿದರು. ಸಮಾರಂಭದ ಸೊಗಡನ್ನು ಕುಮಾರಿ ಯಶಶ್ರೀ ಆಕದಾಸ ತಮ್ಮ ಕ್ಯಾಮರಾದಲ್ಲಿ ಸೆರೆಹಿಡಿದು ಸಹಕರಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

---

## ಮಾಮ್

**- ಶ್ರೀಮತಿ ಶಾರದಾ ಎ. ಅಂಚನ್, ನವಿಮುಂಬಯಿ**

ಬಡಜನರ ತೆರಿಗೆಯಲಿ ರಾಜಕಾರಣಿಗಳ ಗದ್ದುಗೆ ಭದ್ರವಾಗುತಿರುವಾಗ
ಹೆಣ್ಣು ರೂಪವ ಕಂಡು ಕಪಟ ಸನ್ಯಾಸಿ ಕಾಮಾತುರಗೊಳ್ಳುತ್ತಿರುವಾಗ
ಹೆತ್ತ ತಪ್ಪಿಗೆ ಮಾತಾಪಿತರೇ ಆ್ಯಸಿಡ್‌ನಲಿ ಕರಕಲಾಗುತ್ತಿರುವಾಗ
ನೀಲಿಚಿತ್ರಗಳ ತಾರೆ ಪತಿವ್ರತೆಯಾಗಿ ನಟಿಸಿ ಮನ್ನಣೆ ಪಡೆದಿರುವಾಗ
ಬೇಸತ್ತು ಅಲ್ಲೊಂದು ಆಧ್ಯಾತ್ಮ ನಿವಾಸ ಹೂಡಬೇಕೆಂದಿರುವೆ
'ಮಾಮ್' ನೀನೆಂದು ಹಿಂತಿರುಗಿ ಬರಲಿರುವೆ?
ಗ್ರಂಥ, ಪಠಣ, ಪಾರಾಯಣಗಳ ಎಂದು ಕೊಂಡೊಯ್ಯಲಿರುವೆ?

ಮಾನವೀಯತೆಯ ಸೆಲೆಯ ಶೋಧಿಸುತ್ತಾ
ಅಮಾನವೀಯ ಜನರಿಂದ ದೂರ ಸರಿಯುತ್ತಾ
ಕಲುಷಿತವಿರದ ನಿರ್ಮಲ ಹೃದಯಗಳ ಹುಡುಕುತ್ತಾ
ಕಾಡಿಬೇಡಿಯಾದರೂ ನೆಮ್ಮದಿಯ ಬದುಕ ಅರಸುತ್ತಾ
ಮಂಗಳದಲ್ಲೊಂದು ನೆಲೆಯ ಹುಡುಕುತಿರುವೆ
'ಮಾಮ್' ನೀನೆಂದು ಹಿಂತಿರುಗಿ ಬರಲಿರುವೆ?
ಪ್ರತಿಫಲಾಪೇಕ್ಷೆ ಮರೆತು ಎಂದು ನನ್ನ ಕೊಂಡೊಯ್ಯಲಿರುವೆ?

❀ ❀ ❀

## ಪ್ರಶಸ್ತಿ

### ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ

**- ಪ್ರೊ. ಗಜಾನನ ಈಶ್ವರ ಹೆಗಡೆ, ಮೈಸೂರು**

ಕರ್ಕಿ ಅರಿವಿನ ಬೀಡು
ಹಾರುವರಿಗಿದು ಗೂಡು
ದಾಟಿ ನೆರೆ ರಾಜ್ಯಗಳ
ಗಡಿಯ ಮುಂದರಿದು
ತೋರಿ ಮಾರ್ಗವ ಬದು
ಕಿಗಾಧಾರಗಳ ಹಲವ
ಸೇರಿದರಿಗಿತ್ತರುನ್ನ
ತಿಯ ಘನತೆಗಳ॥

ಸೂರಿ ವೆಂಕಟರಮಣ
ಶಾಸ್ತ್ರಿ ಸಜ್ಜನ ವಿಬುಧ
ಸೇರಿ ಮುಂಬೈ ಅಲ್ಲಿ
ಬಗೆದ ಕನ್ನಡವ
ಹೊಸ ಚಿಂತನೆಯ ಇಗ್ಗ-
ಪ್ಪ ಹೆಗಡೆ ನಾಟಕ ರಚಿಸಿ
ಮೌಢ್ಯ ಮುಖಕದ ಹಿಡಿದ
ಜನರು ಬೆರಗಾಗೆ

☆ ☆ ☆

## ಎಲ್. ಎಸ್. ಶಾಸ್ತ್ರೀಜಿ

ಊರುಗೋಲಿಗೆ ಬೇಕೇ ತಾರಕದ ಸಂಗೀತ
ತಾಳಲಯ ಹಿಡಿವ ಚಂಡೆಯ ನಾದ ನುಡಿತ
ಬಯಸದೇನನು ಹಿಡಿದ ಕೈಕಾಲ್ಗೆ ಬಲತಾನು
ನೆರೆ ಕೋಲಿನಂತಿಹರು ಶಾಸ್ತ್ರಿ ಬಳಗದಲಿ
ಊರೆ ಪಟ್ಟಣವೆ ರಾಜ ಭವನದ ಮಡಿಲೆ
ನೆರೆರಾಜ್ಯದೊಡ್ಡೊಲಗದ ಜರಿಯ ಶಾಲೆ
ಮಾನವುಳ್ಳರಿಗೊಪ್ಪುವಂತ ಸನ್ಮಾನಗಳು
ಶಾಸ್ತ್ರಿ ಸಜ್ಜನಿಕೆ ಪ್ರತಿಭೆಯನು ಒಪ್ಪಿದವು
ಸೂರಿ ವೆಂಕಟರಮಣ ಶಾಸ್ತ್ರಿ ಸಜ್ಜನ ವಿಬುಧ
ಅವರ ಹೆಸರಲಿ ಪತ್ರಕರ್ತರಿಗೆ ಸಲುವ
ಘನ ಪ್ರಶಸ್ತಿಯು ಅರಸಿ ನಮ್ಮ ಶಾಸ್ತ್ರಿಯ ಕೊರಳ
ಹೊಂದಿತಿದೊ ಅಭಿನಂದಿಸುವೆ ಹೃದಯ ತುಂಬಿ
ತಿಳಿಗನ್ನಡದ ಭಾಷೆ ಅರ್ಥ ಅರಳುವ ರಚನೆ
ಕವಿತೆ ನಾಟಕ ಗದ್ಯ ಒಪ್ಪುವ ವಿಮರ್ಶೆ
ಶಾಸ್ತ್ರಿಗಳಿಗಿಂತಿದೇ ಎಂಬ ಇತಿಮಿತಿಯಿಲ್ಲ
ಮೂರ್ತಿ ತೋರುವ ಆರತಿಯು ಇವರ ಬರೆಹ॥

ಹಿಂದಿ ಸಂಸ್ಕೃತ ಆಂಗ್ಲಭಾಷೆ ಕರತಲಾಮಲಕ
ಕನ್ನಡದ ಸಿಹಿಬೆರೆತ ಪಾಕ ರುಚಿಯಧಿಕ
ಹೃದಯದೈಸಿರಿ ಬೆರೆತ ಸಮಭಾವ ಸಹಬಾಳ್ವೆ
ಹದಗೊಂಡ ಜೇಂಗೊಡವು ಶಾಸ್ತ್ರಿಗಳ ನುಡಿಯ ।

ಊರ ಬಿಟ್ಟರು ಇವರ ಬೇರು ಹೊನ್ನಾವರದಿ
ಕವಲೊಡೆದು ಹೂ ಹೀಚು ಫಲಿತ ಫಲಭಾವ
ರಸಿಕರೆದೆ ಆರ್ದ್ರವಾಗುವ ಮೈತ್ರಿ ಭಾವಜಲ
ನೆಲೆಯೆ ನಂದನ ವಿವರ ನೆರೆ ನುಡಿಯ ಸಿರಿಗೆ ॥

❀ ❀ ❀

PAGE DONATED BY : SHRI V. G. BHAT, NIGDI

# ಅಹಿಂಸಾಚಾರದ ದಾರಿಯಲ್ಲಿ

✍ ಗೋ. ಗೋ ಹೆಗಡೆ, ಕೋಡಗದ್ದೆ

ಭಾರತ ಕುರುಕ್ಷೇತ್ರ ಯುದ್ಧದ ಪ್ರಾರಂಭದಲ್ಲಿ ಪಾಪಭಯದಿಂದ ನಡುಗಿ ಅರ್ಜುನ ಶಸ್ತ್ರಾಸ್ತ್ರ ಸನ್ಯಾಸ ಮಾಡಿದಾಗ ಆತನಿಗೆ ಶ್ರೀಕೃಷ್ಣ ಏನು ಹೇಳಿದ್ದಾನೆಂದು ನಿನಗೆ ಗೊತ್ತೋ? 'ಕೊಲ್ಲುವವನೂ ನಾನೆ, ಕೊಲ್ಲಿಸುವವನೂ ನಾನೇ- ನೀನು ನೆಪಮಾತ್ರಕ್ಕೆ ಅಷ್ಟೆ- ನಿನ್ನ ಕ್ಷಾತ್ರಧರ್ಮಕ್ಕನುಸರಿಸಿ ಯುದ್ಧ ಮಾಡು'! ಹೀಗೆಯೇ ದೇವರು ನನಗಿದನ್ನು ಪ್ರೇರೇಪಿಸುತ್ತಾನೆ. ಅದಕ್ಕೆ ತಕ್ಕಂತೆ ತಾನು ಅನುಸರಿಸುತ್ತೇನೆ - ಈ ಕೆಲಸವನ್ನು ತಾನು ಮಾಡುತ್ತೇನೆಂದುಕೊಂಡಾಗ ಮಾತ್ರ ಪಾಪ ಅಂಟುತ್ತದೆ. ಇದು ತಾನಲ್ಲ ಅವನ ಇಷ್ಟಕ್ಕನುಸರಿಸಿ ತಾನಿಂಥ ಕೆಲಸಗಳನ್ನು ಮಾಡುತ್ತೇನೆಂದು ಕೊಂಡಾಗ ಯಾವ ಪಾಪದ ಭಯವೂ ಇಲ್ಲ. ನಾನಾಗ ಚಿಂತಿಸತೊಡಗಿದೆ. ಹಾಗಾದರೆ ವೇದಾಂತದ ತಿರುಳು ಇಷ್ಟು ಸುಲಭದಲ್ಲಿದೆಯೇ? ಯಾಕೋ ನನ್ನ ಮನಸ್ಸು ಒಪ್ಪದಾಗಿತ್ತು. ಇಂಥ ಕ್ರೂರ ಸಿದ್ಧಾಂತದ ಎದುರು ಹತಾಶನಾಗಿ ಸೋಲುತ್ತಾ ದುಃಖದಿಂದ ಕುಸಿಯುವಂತಾಗಿತ್ತು. ನನ್ನ ಅಂತರಂಗ ಸಾರಿ ಸಾರಿ ಹೇಳುತ್ತಿತ್ತು - 'ಇದು ಶುದ್ಧ ತಪ್ಪು' ನನ್ನದು ಅರಣ್ಯ ರೋಧನವಾಗಿಯೇ ಮತ್ತೆ ಕೆಲವು ಕಾಲ ಘೋರ ಆಹುತಿ ಕಾರ್ಯ ಮುಂದುವರಿಯಿತು. ಮುಂದೊಂದು ದಿನ ಅದೇ ವರ್ಷ ಈ ಸಮಸ್ಯೆಗೆ ಹರಿಗಡಿ ಕಾಲ ಬಂತು. ನಮ್ಮ ಕುಟುಂಬದ ಗೋಕರ್ಣ ಕ್ಷೇತ್ರ ಪುರೋಹಿತರು ವೇ।ಮೂ। ನರಸಿಂಹ ಶಿವ ಭಟ್ಟ ಬೈಲಕೇರಿಯವರಾಗಿದ್ದರು. ಪ್ರತಿವರ್ಷ ಎರಡು ದಿನದ ಗಣಪತಿ ಮೂರ್ತಿ ಪೂಜೆ ಹಾಗೂ ನವರಾತ್ರಿ ಮೂರು ದಿನಗಳ ಉತ್ಸವವನ್ನು ಸಾಂಗೋಪಸಾಂಗ ವಾಗಿ ನಡೆಸಿಕೊಡುವ ವೈದಿಕರೂ ಅವರೇ ಆಗಿದ್ದರು. ಅವರಿಗೆ ನಾವು ಪುರಾಣಿಕರೆಂದು ಕರೆಯುತ್ತಿದ್ದೆವು. ನಮ್ಮ ತಂದೆಗಿಂತ ಹಿರಿಯರಾಗಿ ಶುದ್ಧಾಚಾರದ ನೈಷ್ಠಿಕ ಸಾತ್ವಿಕ ಬ್ರಾಹ್ಮಣರಾದ್ದರಿಂದ ನಮ್ಮ ತಂದೆಗೆ ಅವರ ಮೇಲೆ ತುಂಬ ಗೌರವವಿತ್ತು. ಪ್ರತಿವರ್ಷದಂತೆ ಆ ಬಾರಿಯೂ ನವರಾತ್ರಿ ಉತ್ಸವ ನಡೆಸಿಕೊಡಲು ಪುರಾಣಿಕರು ಬಂದಿದ್ದರು. ನಾನು ಅವರಲ್ಲಿ ನನ್ನ ಸಮಸ್ಯೆ ಹೇಳಿಕೊಳ್ಳಬೇಕಾಗಿತ್ತು. ಸಮಯ ಕಾಯುತ್ತಿದ್ದೆ. ಮೂರೂ ದಿನದ ದೇವತಾಕಾರ್ಯ ಮುಗಿದು ರಾತ್ರಿ ಮಹಡಿಯ ಮೇಲೆ ಪುರಾಣಿಕರಿಗೆ ಮಲಗಲು ಹಾಸಿಗೆ ಹಾಸಿಕೊಟ್ಟು ನಾನು ಪಕ್ಕದಲ್ಲಿ ಮಲಗಿದ್ದೆ. ಪುರಾಣಿಕರು ಮಲಗಿದ ಅನಂತರ ನಿಧಾನವಾಗಿ ನಾನು ತುಂಬೆ ಹುಳ ಚಿತ್ರಹಿಂಸೆಯನ್ನು ನನ್ನ ತಂದೆಯವರು ಒಂದು ವ್ರತವಾಗಿ ಆಚರಿಸುತ್ತಿರುವ ಘನಕಾರ್ಯ ಹಾಗೂ ಅವರು ಹೊಂದಿರುವ ತಾತ್ವಿಕ ಸಿದ್ಧಾಂತದ ಕುರಿತು ವಿವರಿಸಿ ಅದಕ್ಕೆ ನಿಮ್ಮ ಅಭಿಪ್ರಾಯ ಏನೆಂದು ಕೇಳಿದೆ. ಆದರೆ ನಮ್ಮ ತಂದೆಯವರ ಗುಣಸ್ವಭಾವ ಗೊತ್ತಿದ್ದ ಅವರು ಕೂಡ ಕೂಡಲೇ ಏನನ್ನೂ ಹೇಳಲಾರದವರಾಗಿ ಮೌನವಾಗಿ ಮಲಗಿಬಿಟ್ಟರು. ಅಯ್ಯೋ ದೇವರೇ ಎಂದುಕೊಂಡು ನಾನೂ ಆಗ ಸುಮ್ಮನೇ ಮಲಗಿದ್ದೆ.

ಮಾರನೆ ದಿನ ಬೆಳಗಾಯಿತು. ನಿತ್ಯ ವಿಧಿ ಪೂರೈಸಿ ನಮ್ಮ ತಂದೆ ಹಾಗೂ ಪುರಾಣಿಕರು ಚಹಾ ತಿಂಡಿಗೆ ಅಡುಗೆ ಮನೆಗೆ ಬಂದು ಕುಳಿತರು. ಅವರಿಬ್ಬರಿಗೂ ದೋಸೆ ಹಾಗೂ ಚಹಾ ನೀಡಿ ಅಲ್ಲೇ ನಿಂತುಕೊಂಡ ನಾನು ಮತ್ತೆ ಪುರಾಣಿಕರಲ್ಲಿ ಹಿಂದಿನ ದಿನ ಹೇಳಿದ ತುಂಬೆ ಹುಳದ ಯಜ್ಞಾಹುತಿ ಪ್ರಕರಣವನ್ನೂ ಅದರಿಂದ ಸಿಗುವ ದೇವಸ್ಥಾನ ಕಟ್ಟುವ ಪುಣ್ಯ ಸಿಗುವುದನ್ನೂ ಭಗವದ್ಗೀತಾ ಸಾರೋದ್ಧಾರದ ಕಲ್ಪನೆಯನ್ನೂ ಕೊಟ್ಟು- ಪುರಾಣಿಕರೇ ಇದು ಹೌದೇ? ಎಂದು ಗಟ್ಟಿಯಾಗಿಯೇ ಮರು ಪ್ರಸ್ತಾಪಿಸಿದೆ. ಸ್ವಲ್ಪ ಕಾಲ ಯೋಚಿಸಿದವರಾಗಿ ಕೊನೆಗೆ ನನ್ನ ತಂದೆಯವರೊಂದಿಗೆ ಮಾತಾಡತೊಡಗಿದರು. - 'ನೋಡು ಗೋವಿಂದ... ಗೋಪಾಲ ಹೇಳಿದ್ರಲ್ಲೂ ಅರ್ಥ ಇದ್ದು. ನಾವು ಇನ್ನೊಬ್ಬರಿಗೆ ಹಿಂಸೆ ಕೊಡುವಾಗ ಅದು ದೇವರ ಪ್ರೇರಣೆ ಎನ್ನುತ್ತೇವೆ. ಅದೇ ಆತ ನಮಗೆ ಕತ್ತಿ ಹಿಡಿದು ಕಡಿಯಬಂದಾಗ ಅವನಿಗೂ ದೇವರ ಪ್ರೇರಣೆಯಾಗಿದೆ ಎಂದು ನಂಬಿ ಪ್ರತಿಭಟಿಸದೆ ಕೈಕೊಡಲು ಯಾರೂ ಹೋಗುವುದಿಲ್ಲ ಅಲ್ಲವೇ? ಹಾಗೊಮ್ಮೆ ಕೊಡಲು ಸಿದ್ಧರಾದರೆ ಆಗ ಅದು ಪರಮ ಜ್ಞಾನವಾಗುತ್ತದೆ. ದೇವರು ಇಬ್ಬರಿಗೂ ಇರುತ್ತಾನೆ' - ಎಂದಾಗ ನನ್ನ ತಂದೆಯವರು ನನ್ನನ್ನು ದುರುಗುಟ್ಟಿ ನೋಡಿ ಸುಮ್ಮಗಾದರು. ಅಂತೂ ಅಲ್ಲಿಂದ ಮುಂದೆ ಈ ತುಂಬೆ ಹುಳದ ಹತ್ಯಾಕಾಂಡ ಪರಿಸಮಾಪ್ತಗೊಂಡಿತು. ಹಿಂದೂ ಧರ್ಮದ ಮೂಲಗ್ರಂಥಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತಿರುಚಿ ಅರ್ಥೈಸಿಕೊಳ್ಳುವ ಮಹಾಮೇಧಾವಿಗಳನ್ನು ನಾವು ಇವತ್ತಿಗೂ ಕಾಣುತ್ತಿದ್ದೇವೆ. ಅದೇ ರೀತಿ ಬೈಬಲ್ ಕುರಾನ್‌ಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳುವ ಕ್ರಿಶ್ಚಿಯನ್ ಮತ್ತು ಮುಸ್ಲಿಂ ಮತ ಅನುಯಾಯಿಗಳೂ ಇದ್ದಾರೆ.

ನಾನಾಗ ಸಿದ್ದಾಪುರ ಕಾಲೇಜು ಗ್ರಂಥಾಲಯದಲ್ಲಿ ನೌಕರಿ ಹಿಡಿದು ಕೆಲವೇ ತಿಂಗಳಾಗಿದ್ದವು. ನಾನು ಬೆಳಿಗ್ಗೆ ಮನೆಯಲ್ಲೇ ಊಟ ಮಾಡಿ ಮಧ್ಯಾಹ್ನದ ಉಪಾಹಾರವನ್ನು ಕಟ್ಟಿಕೊಂಡು ತಂದು ಊಟದ ಬಿಡುವಿನಲ್ಲಿ ತೆಗೆದುಕೊಳ್ಳುತ್ತಿದ್ದೆ. ಅದಕ್ಕಾಗಿ ಕಾಲೇಜು ಹಿಂದುಗಡೆ ಅನಾನಸು ಪ್ಲಾಂಟೇಶನ್ ಮಾಡಿ ಪಾಳು ಬಿದ್ದ ದಿಣ್ಣೆಗಳ ಮಧ್ಯದ ತಗ್ಗಿನಲ್ಲಿ ಕುಳಿತು ಎಂದಿನಂತೆ ನನ್ನ ಪಡಲಿಗೆ ಬಿಚ್ಚಿ ದೋಸೆ ಡಬ್ಬ, ಬೆಲ್ಲದ ಲೋಟ, ಹಾಲು ನೀರಿನ ಬಾಟಲಿ ಎಲ್ಲ ಒಂದೊಂದಾಗಿ ಹೊರತೆಗೆದಿಟ್ಟೆ. ಜನವರಿ ತಿಂಗಳ ಕಾಲವಾದ್ದರಿಂದ ಮಟ ಮಟ ಮಧ್ಯಾಹ್ನದ ಬಿರು ಬಿಸಿಲು ಕೂಡ ಹಿತವಾಗಿಯೇ ಇತ್ತು. ನಾನು ದೋಸೆ ಮುರಿದು ಬೆಲ್ಲ ಹಾಗೂ ಖಾರದ ಹಿಟ್ಟಿನಲ್ಲಿ ಅದ್ದಿ ತಿನ್ನತೊಡಗಿದೆ. ಪಕ್ಕದಲ್ಲಿಯೇ ಕುನ್ನೇರಳ ಸಣ್ಣ ಹಿಂಡಿನಿಂದ ದೊಡ್ಡ ಗೊದ್ದವೊಂದು ಓಡೋಡಿ ಬಂತು. ಬಂದದ್ದೇ ಬೆಲ್ಲದ ಲೋಟ ಹತ್ತಿ ಬೆಲ್ಲ ಹೀರತೊಡಗಿತು. ನಾನು ಬಹಳ ಖುಷಿಯಿಂದ ಪಾಪ ಅದೂ ತಿನ್ನಲಿ ಎಂದು ಉದಾರತೆಯಿಂದ ಕುಳಿತೆ. ನೋಡ ನೋಡುವಷ್ಟರಲ್ಲಿ ಗೊದ್ದ ಬೆಲ್ಲದ ಲೋಟದ ಗೋಣೆಯಿಂದ ಕೆಳಗಿನ ಜೋನಿಬೆಲ್ಲಕ್ಕೆ ಇಳಿದದ್ದೇ ತಡ ಒದ್ದಾಡತೊಡಗಿತು. ಆಗ ನಾನು ಕೂಡಲೇ ಗೊದ್ದವನ್ನೆತ್ತಿ ನೆಲದ ಮೇಲೆ ಬಿಟ್ಟೆ. ಆದರೂ ಅಂಟಿಕೊಂಡ ಜೋನೀ ಬೆಲ್ಲದ ಹೊದಿಕೆಯಿಂದ ಉಸಿರುಗಟ್ಟಿ ಸತ್ತೇ ಹೋಯಿತು. ನನ್ನ ಉತ್ಸಾಹದ ಮೂಡೆಲ್ಲ ಜರ್ರನೆ ಇಳಿಯಿತು. ಅಯ್ಯೋ! ಅಲ್ಲಿಂದ ಇಲ್ಲಿಗೆ ಬಂದು ಒಂದು ಜೀವಹತ್ಯೆಗೆ ಕಾರಣವಾದೆನಲ್ಲ ಎಂದು ಮನಸ್ಸು ಕಸಿವಿಸಿಗೊಂಡಿತು. ಅದೇ ವೇಳೆ ಒಳಮನಸ್ಸು ತರ್ಕ ಹೂಡಿತು. ಇದರಲ್ಲಿ ನಿನ್ನದೇನು ತಪ್ಪು. ಗೊದ್ದವೂ ಬೆಲ್ಲದ ಸಿಹಿಯನ್ನು ತಿಂದು ಆನಂದಿಸಲಿ ಎಂದು ಉದಾರತೆಯನ್ನು ತೋರಿದೆ ಆದರೆ ಗೊದ್ದವು ಬೆಲ್ಲದ ಲೋಟದ ಗೋಣೆಯ ಮೇಲೆ ಕುಳಿತು ತನ್ನ ಚುಂಚಿನಿಂದ ಹೀರಿದ್ದರೆ ಆಗುತ್ತಿತ್ತು. ಅಷ್ಟು ಸಾಲದೆ ದುರಾಸೆಯಿಂದ ಕೆಳಗಿಳಿಯಿತು. ಅದು ಗೊದ್ದದ್ದೇ ತಪ್ಪು ಎಂದು ನಾನು ಸಮಾಧಾನ ಮಾಡಿಕೊಳ್ಳಲು ಪ್ರಯತ್ನಿಸಿದೆ. ಆದರೂ ಎಚ್ಚೆತ್ತ ವಿವೇಕ - ಇಲ್ಲಿ ನಾನು ಅಪಾಯಕಾರಿಯಾಗಿ ಆಕರ್ಷಕ ವಸ್ತುವನ್ನು ಇಟ್ಟಿದ್ದರಿಂದಲೇ ಅದು ಸತ್ತಿತು - ಕೊನೆಯ ಪಕ್ಷ ಗೊದ್ದ ಕಣ್ಣಿಗೆ ಬಿದ್ದ ಕೂಡಲೇ ಕುನ್ನೇರಳೆ ಎಲೆಯೊಂದನ್ನು ತರಿದು ಅದರಲ್ಲಿ ಸಣ್ಣ ಹನಿ ಬೀಳಿಸಿ ಅದರ ಮುಂದೆ ನೀಡಬಹುದಿತ್ತಲ್ಲ. ಆದ್ದರಿಂದ ಗೊದ್ದದ ಸಾವಿಗೆ ನೀನೇ ಹೊಣೆಗಾರ ಎಂದು ನನ್ನ ಬುದ್ಧಿ ತೀರ್ಮಾನಿಸಿತು. ಹೀಗೆ ಹಿಂಸೆ - ಅಹಿಂಸೆಯ ವಿಚಾರ ಸೂಕ್ಷ್ಮವಾದದ್ದು. ಎಷ್ಟೋ ವೇಳೆ ಮೇಲ್ನೋಟಕ್ಕೆ ನಮ್ಮ ಆಚರಣೆ ಸರಿ ಎನಿಸಿದರೂ ಆಳವಾಗಿ ಯೋಚಿಸಿದಾಗ ನಮ್ಮ ತಪ್ಪು ಅರಿವಾಗಲು ಸಾಧ್ಯವಿದೆ. ಆದ್ದರಿಂದ ಪ್ರತಿಕ್ಷಣವೂ ನಾವು ಜಾಗ್ರತರಾಗಿದ್ದು ನಮ್ಮ ಪಾಲಿನ ಕರ್ತವ್ಯ ನಿರ್ವಹಿಸಬೇಕಾಗುತ್ತದೆ.

*(ಮುಂದುವರಿಯುವುದು)*

# ಸಂಕ್ಷಿಪ್ತ ಸುದ್ದಿಗಳು

## ‘ಬನಸಿರಿ’ ಅನಾವರಣ ಮೂಲಕ ‘ಭುವನೇಶ್ವರಿ ಹೆಗಡೆ’ಗೆ ಅಭಿನಂದನೆ



ವೃತ್ತಿಯಿಂದ ನಿವೃತ್ತರಾದ ಹಿರಿಯ ಹಾಸ್ಯ ಲೇಖಕಿ ಭುವನೇಶ್ವರಿ ಹೆಗಡೆಯವರನ್ನು ಜೂನ್ 3 ರಂದು ಕದ್ರಿಯ ಲಯನ್ಸ್ ಸೇವಾ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ‘ಭುವನೇಶ್ವರಿ ಹೆಗಡೆ ಅಭಿನಂದನ ಸಮಿತಿ’ಯ ವತಿಯಿಂದ ಅಭಿನಂದಿಸಲಾಯಿತು. ಇದೇ ವೇಳೆ ‘ಬನಸಿರಿ’ ಅಭಿನಂದನ ಗ್ರಂಥವನ್ನು ಬಿಡುಗಡೆಗೊಳಿಸಲಾಯಿತು.

ಬಳಿಕ ಮಾತನಾಡಿದ ಭುವನೇಶ್ವರಿ ಹೆಗಡೆ ‘ನಗದವರು ಮನುಷ್ಯರೇ ಅಲ್ಲ ಎಂದು ನಂಬಿಕೊಂಡು ಹಾಸ್ಯ ಸಾಹಿತ್ಯವನ್ನು ರಚಿಸಿದ ನನಗೆ ಎಲ್ಲ ವರ್ಗದ ಅಭಿಮಾನಿಗಳಿದ್ದಾರೆ ಎಂಬುದಕ್ಕೆ ಈ ಕಾರ್ಯಕ್ರಮ ಸಾಕ್ಷಿಯಾಗಿದೆ. ತಾವೆಲ್ಲ ಪ್ರೀತಿಯಿಂದ ಸತ್ಕರಿಸಿದ ಈ ಕಾರ್ಯಕ್ರಮದಿಂದ ನನ್ನ ಮನಸ್ಸು ತುಂಬಿ ಬಂದಿದೆ’ ಎಂದರು.

ಸಾಹಿತಿ ವೈದೇಹಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅಪರಂಜಿ ಪತ್ರಿಕೆಯ ಸಂಪಾದಕ ಎಂ. ಶಿವಕುಮಾರ್ ‘ಬನಸಿರಿ’ ಅಭಿನಂದನ ಗ್ರಂಥವನ್ನು ಬಿಡುಗಡೆಗೊಳಿಸಿದರು. ಲೇಖಕಿ ಚಂದ್ರಕಲಾ ನಂದಾವರ ಮತ್ತು ನಿವೃತ್ತ ಪ್ರಾಂಶುಪಾಲ ಡಾ. ಸತ್ಯನಾರಾಯಣ ಮಲ್ಲಿಪಟ್ಣ ಹಾಗೂ ಉದ್ಯಮಿ ಪ್ರಸಾದ್ ರಾಜ್ ಕಾಂಚನ್ ಶುಭ ಹಾರೈಸಿದರು.

ಸಾಹಿತಿ ಹಾಗೂ ‘ಬನಸಿರಿ’ ಗ್ರಂಥದ ಸಂಪಾದಕ ಎನ್. ರಾಮನಾಥ್ ಮಾತನಾಡಿದರು. ಪತಿ ಶಂಭು ಹೆಗಡೆ ಮತ್ತು ಪುತ್ರಿ ಆಭಾ ಹೆಗಡೆ ಮೊದಲಾದವರು ಉಪಸ್ಥಿತರಿದ್ದರು.

ಅಭಿನಂದನ ಸಮಿತಿಯ ಅಧ್ಯಕ್ಷ ಅರೆಹೊಳೆ ಸದಾಶಿವ ರಾವ್ ಸ್ವಾಗತಿಸಿದರು. ಕಾರ್ಯದರ್ಶಿ ಡಾ. ಮುರಳಿ ಮೋಹನ್ ಚೂಂತಾರು ವಂದಿಸಿದರು. ಆಕಾಶವಾಣಿಯ ನಿವೃತ್ತ ಉದ್ಘೋಷಕಿ ಶಕುಂತಳಾ ಕಿಣಿ ಮತ್ತು ಅಭಿಷೇಕ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

## ಮುಂಬಯಿ ವಿಶ್ವವಿದ್ಯಾಲಯ ಕನ್ನಡ ಎಂ. ಎ. ಗೆ ಅರ್ಜಿ ಆಹ್ವಾನ

ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯವು ಕನ್ನಡ ಎಂ. ಎ. (ಸೆಮಿಸ್ಟರ್) ಪ್ರಥಮ ವರ್ಷ ತರಗತಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಬಿ. ಎ., ಬಿ. ಕಾಂ., ಬಿ. ಎಸ್ಸಿ ಉತ್ತೀರ್ಣರಾದವರು ಅರ್ಜಿಯನ್ನು ಸಲ್ಲಿಸಬಹುದು. 2017-2018ನೇ ಸಾಲಿನ ತರಗತಿಗಳಿಗೆ ಸೇರಬಯಸುವ ಅರ್ಹ ಅಭ್ಯರ್ಥಿಗಳು ವಿಭಾಗದ ಕಚೇರಿಯಿಂದ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಬಹುದು. ಅರ್ಜಿಗಳನ್ನು ಅಂಚೆ ಮೂಲಕ ತರಿಸಿಕೊಳ್ಳುವ ಅಭ್ಯರ್ಥಿಗಳು ಈ ಕೆಳಗಿನ ವಿಳಾಸಕ್ಕೆ ಸ್ವವಿಳಾಸ ಹೊಂದಿದ ಹತ್ತು ರೂಪಾಯಿಗಳ ಸ್ಟಾಂಪ್ ಹಚ್ಚಿದ ಕವರುಗಳನ್ನು ಲಗತ್ತಿಸಿ ವ್ಯವಹರಿಸಬೇಕು.

ಡಾ. ಜಿ. ಎನ್. ಉಪಾಧ್ಯ, ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ರಾನಡೆ ಭವನ, ವಿದ್ಯಾನಗರಿ, ಸಾಂತಾಕ್ರೂಜ್ (ಪೂರ್ವ) ಮುಂಬಯಿ - 400 098 (ದೂರವಾಣಿ ಸಂಖ್ಯೆ, 26543530, 26543469, 26543345) Email : kannadadepartment@gmail.com (University website www.mu.ac.in)

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅರ್ಹ ವಿದ್ಯಾರ್ಥಿಗಳಿಗೆ ವಾರ್ಷಿಕ 25,000 ರೂಪಾಯಿ ಹಾಗೂ ಕರ್ನಾಟಕ ಸಂಘ ಮುಂಬಯಿ ವಾರ್ಷಿಕ ಮೂರು ಸಾವಿರ ರೂ. ವಿದ್ಯಾರ್ಥಿವೇತನ ನೀಡುತ್ತಿದೆ. ತುಂಬಿದ ಅರ್ಜಿಯನ್ನು ಜುಲೈ ತಿಂಗಳ ದಿನಾಂಕ 15ರೊಳಗೆ ತಲುಪುವಂತೆ ಕಳುಹಿಸಿಕೊಡಲು ವಿಭಾಗದ ಪ್ರಕಟಣೆ ತಿಳಿಸಿದೆ.

## ವಿದುಷಿ ವೀಣಾ ಶಾಸ್ತ್ರಿ ಅವರಿಗೆ ಸಂಸ್ಕೃತಿ ಇಲಾಖೆಯ ನಗದು ಪುರಸ್ಕಾರ

ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಂಶೋಧನ ಸಹಾಯಕಿಯಾಗಿ ಕಾರ್ಯ ನಿರ್ವಹಿಸಿದ ವಿದುಷಿ ವೀಣಾ ಶಾಸ್ತ್ರಿ ಅವರ ಎಂ. ಫಿಲ್ ಸಂಶೋಧನ ಸಂಪ್ರಬಂಧಕ್ಕೆ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಗದು ಪುರಸ್ಕಾರ ಲಭಿಸಿದೆ.

*PAGE DONATED BY : **SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT (DEC. 2012)***



2015-2016ನೇ ಸಾಲಿನಲ್ಲಿ ಪ್ರಸ್ತುತ ಪಡಿಸಿದ ಕನ್ನಡದ ಮಹತ್ವದ ಶೋಧ ಸಂಪ್ರಬಂಧಗಳಿಗೆ ಸಂಸ್ಕೃತಿ ಇಲಾಖೆ ಪ್ರಕಟಣಾ ಪುರಸ್ಕಾರ ಯೋಜನೆಯ ಅಡಿಯಲ್ಲಿ ಈ ಸಂಪ್ರಬಂಧ 25 ಸಾವಿರ ರೂ. ನಗದು ಪುರಸ್ಕಾರಕ್ಕೆ ಆಯ್ಕೆಯಾಗಿದೆ.

ವಿದುಷಿ ವೀಣಾ ಶಾಸ್ತ್ರಿ ಅವರು ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ. ಎನ್. ಉಪಾಧ್ಯ ಅವರ ಮಾರ್ಗದರ್ಶನದಲ್ಲಿ 'ಒಡೆಯರ ಆಳ್ವಿಕೆಯಲ್ಲಿ ಸಂಗೀತ ಮತ್ತು ಸಾಹಿತ್ಯ' ಎಂಬ ವಿಷಯದ ಕುರಿತು ಅಧ್ಯಯನ ನಡೆಸಿ ಮುಂಬಯಿ ವಿಶ್ವವಿದ್ಯಾಲಯದಿಂದ ಇತ್ತೀಚೆಗೆ ಎಂ. ಫಿಲ್ ಪದವಿ ಪಡೆದಿದ್ದರು. ಇದೀಗ ಈ ಸಂಪ್ರಬಂಧ ಪುಸ್ತಕ ರೂಪದಲ್ಲಿ ಬೆಳಕು ಕಾಣುತ್ತಿದೆ.

ವೀಣಾ ಶಾಸ್ತ್ರಿ ಅವರು ಮುಂಬಯಿ ವಿಶ್ವವಿದ್ಯಾಲಯದಿಂದ ಎಂ. ಎ. ಯಲ್ಲಿ ಪ್ರಥಮ ರ್‍ಯಾಂಕ್ ಮತ್ತು ವರದರಾಜ ಆದ್ಯ ಬಂಗಾರದ ಪದಕವನ್ನು ಪಡೆದಿದ್ದಾರೆ. ಅವರು ಸಂಗೀತ ವಿದ್ವತ್ ಪರೀಕ್ಷೆಯಲ್ಲಿ ಮೈಸೂರು ಕೇಂದ್ರದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ್ದು, ರಾಷ್ಟ್ರಮಟ್ಟದಲ್ಲಿ ಅನೇಕ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ದೆಹಲಿ, ಜೈಪುರ, ಕೊಚ್ಚಿ, ಮಂಗಳೂರು, ಬೆಂಗಳೂರು, ಹೊರನಾಡು, ಉಡುಪಿ, ಮುಂಬಯಿ, ಇಂಗ್ಲೆಂಡ್‌ನ ಲೀಡ್ಸ್ ಮುಂತಾದ ಅನೇಕ ಕಡೆಗಳಲ್ಲಿ ಇವರು ಸಂಗೀತ ಕಚೇರಿಗಳನ್ನು ನಡೆಸಿಕೊಟ್ಟಿದ್ದಾರೆ. ವಿದುಷಿ ವೀಣಾ ಅವರು 'ನಾದ ಸರಸ್ವತಿ ಗಾನ ಮಂದಿರ' ಎಂಬ ಸಂಗೀತ ಶಾಲೆಯನ್ನು ಸ್ಥಾಪಿಸಿ ಹಲವಾರು ವಿದ್ಯಾರ್ಥಿಗಳಿಗೆ ಕರ್ನಾಟಕ ಸಂಗೀತವನ್ನು ಕಲಿಸುತ್ತಾ ಉತ್ತಮ ಕಲಾಕಾರರನ್ನಾಗಿ ರೂಪಿಸುತ್ತಿದ್ದಾರೆ. ಕರ್ನಾಟಕದಿಂದ ಹೊರಗಿದ್ದುಕೊಂಡು ಸಂಗೀತವನ್ನು ಉಳಿಸಿ-ಬೆಳೆಸಿ ಸಂಗೀತ ಕಲೆಯ ಪ್ರಸಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಅವರು ಅನೇಕ ಪ್ರಸಿದ್ಧ ಸಂಗೀತಗಾರರಲ್ಲಿ ಒಬ್ಬರಾಗಿದ್ದಾರೆ.

## Achievement



**Kumar Shreeram** S/o. Smt. Jyothi & Shri Shambhu R. Hegde (Grandson of Smt. Manorama & Shri Rajaram S. Hegde) secured 94.8% in Class X CBSE Exam held in March 2017.



**Kumari Aditi Hegde** D/o.Smt. Medha & Shri Prashant Hegde, Sanpada, Navi Mumbai has secured 97.6% in her class 10th CBSE exams 2017. She is the grand daughter of late Smt. Usha Hegde & late Shri M.I.Hegde (Kadbal-Sirsi). She is a student of Apeejay School Nerul.



**Kumari Maitri Bhat** D/o.Smt. Aparna & Shri Vinay Bhat, Charkop secured 92% in class X Maharashtra State Board Exam.



**Kumari Shreelaxmi Hegde** D/o. Smt. Latha & Shri Ganesh N. Hegde Unique Paints, Sirsi, Scored 95.68% in P.U.C. 2nd year exam held by Karnataka State Board on April 2017. She studied at Alva's P.U. College, Moodbidri (D.K.)

***We Congratulate and Wish them all the best in their future.***

## Yajur Upakarma

Yajur Upakarma (Thread changing ceremony) on 9-8-2017 has been organised for the benefit of Havyaka community members at Dombivli Medical Centre between 7.30 a.m. to 10.00 a.m. All are requested to note and take advantage of this opportunity. For details and registration please contact :

| | | |
|---|---|---|
| Dombivli Medical Centre (Sumita Bhat & Jaya Bhat) | - | 0251-2487291 |
| G. V. Hegde | - | 9167434626 |
| Aravind K. Bhat | - | 9821721104 |
| Ramakant Shastri | - | 9819452286 |
| Umesh S. Hegde | - | 8080868649 |

## ಪಯಣ

**– ಜಿ. ಜಿ. ಹೆಗಡೆ, ಬಾಳಗೋಡ**

ಸಪ್ತಸಾಗರದಾಚೆ ನಾನು ನಿಂತಿಹೆ ಚೆಲುವೆ
ನಿನ್ನ ನೆನಪೇ ನನ್ನ ಎದೆಯ ಬೆಳಕು
ಹೊಂಗನಸು ಕಟ್ಟುತಿದೆ ಸಾಧನೆಯ ಪರಿಧಿಯಲಿ
ಬದುಕಿನುದ್ದಕು ನನ್ನ ಹೆಜ್ಜೆಯ ಮೇಲೆ ನೀನಿಟ್ಟ ಹೆಜ್ಜೆ

ನಕ್ಷತ್ರ ಕಾಂತಿಯಲಿ ನಿನ್ನ ಮೊಗ ಹೊಳೆಯುತಿದೆ
ನನ್ನ ಕನಸಿನ ಲೋಕದಾ ಮುಂಬೆಳಗು ಹರಿದು
ನೆಲದ ನಲಿವೆಲ್ಲವನದು ನನ್ನೊಳಗೆ ಸೇರುತಲಿ
ಅನುರಾಗದೊಳಗಿಂದ ಅನುಬಂಧದಲಿ

ನೊಂದ ನೋವನು ನುಂಗಿ ಬದುಕೆಂಬ ದೋಣಿಯಲಿ
ನಾವಿಬ್ಬರೊಂದಾಗಿ ಪಯಣಿಸೋಣ
ನಿನ್ನ ನೀನೇ ಗೆದ್ದು ನನ್ನ ನಾನರಿಯುತಲಿ
ಸಾಗೋಣ ಚೆಲುವಿನಾ ಹೂವು ಅರಳುವಲ್ಲಿ

❀ ❀ ❀

*Page Donated by :* ***Shri Suhas Gunishastri,*** *Prabhadevi In the memory of his parents* ***Late Smt. Rajeshwari & Late Shri P. V. Gunishastri***, *Past President, H.W.T.*

# Glimpses of Award Ceremony



PAGE DONATED BY : **SMT. TRIVENI BHATSHIKAR & SHRI R. T. BHATSHIKAR,** GHATKOPAR IN THE MEMORY OF **LATE SHRI T. R. BHATSHIKAR**

'Havyaka Sandesha' July 2017

**RNI NO. MAHBIL / 2000 / 746,**
**Postal R.NO. MCN/161/2015-2017**
**WPP License No. MR / Tech / WPP - 130 / North / 2017**
**'Licence to post without prepayment'**

**Posted at Mumbai Patrika Channel Stg. Office Mumbai-400 001**
**Date of Publication : 1st of every month**

**REGISTERED NEWSPAPER**

**Date of Posting :**
**2nd, 3rd of every month**

***If undelivered, please return to :***
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

To,

(LM 302)

Hegde Umamaheshwar S.

A-303, Tulsi Darshan CHS, Sunil
Nagar,DNC.School Road, Dombivali
(E). 421 201

421201

# Glimpses of Entertainment Program



PAGE DONATED BY : **K.C & CO., SHRI K.C.HEGDE, BORIVLI, ONIKERI (BENGLE) & FAMILY**